

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 130 | Saturday 25-01-2025 | E-mail : maruti.b.hosamani76@gmail.com | Page: 4 | Price : Rs. 1/-


## ಹರಿಹರದ ತಪೋವನಕ್ಕೆ ಚಲೋ: ಡಿ.ಎಸ್ಎಸ್ ಕರೆ

**ಬಾಗಲಕೋಟೆ** : ದೇಶದ ಶೋಷಿತರ ಧ್ವನಿ ಭಾರತ ರತ್ನ ಡಾ, ಬಿ.ಆರ್ ಅಂಬೇಡ್ಕರ್ ಹಾಗೂ ಕರ್ನಾಟಕ ದಲಿತ ಸೂರ್ಯ ಮಹಾತ್ಮ ಪ್ರೊ, ಬಿ .ಕೃಷ್ಣಪ್ಪ ನವರು ಕಟ್ಟಿ ಬೆಳೆಸಿದ ದಲಿತರ ಏಳ್ಗೆಯ ಹೋರಾಟದ ವಿಮೋಚನಾ ರಥವನ್ನು ಸಂಘಟನಾತ್ಮಕವಾಗಿ ಮುನ್ನಡೆಸಲು ಹಾಗೂ ದಲಿತ ಸೂರ್ಯ ಕೃಷ್ಣಪ್ಪ ನವರು ಕಂಡ ಕನಸಿನ ಹಾದಿಯನ್ನು ಸಾಕಾರ ಗೊಳಿಸಲು ರಾಜ್ಯದ್ಯಾಂತ ಸೋಷಿತರ ಒಳ ಮೀಸಲಾತಿ ಜಾರಿಗಾಗಿ ಸರ್ಕಾರದ ನಿರ್ಣಯದ ವಿಚಾರ ಹಾಗೂ ದಲಿತರ ರಾಜಕೀಯ ಅರಿವು ನೆರವಿನ ಕಾರ್ಯಗಾರಕ್ಕೆ ಕರೆ ಕೊಟ್ಟು ಮಾತನಾಡಿದ ರಾಜ್ಯ ಸಂಘಟನಾ ಸಂಚಾಲಕರಾದ ಮಾರುತಿ.ಬಿ ಹೊಸಮನಿಯವರು ಮಾತನಾಡಿ ಇದೆ ಡಿಸೇಂಬರ್ 25,26 ಹರಿಹರದ ತಪೋವನದಲ್ಲಿ ನಡೆಯುವ ಎರಡು ದಿನಗಳ ಕಾಲ ನಡೆಯುವ ದಲಿತರ ಒಳ ಮೀಸಲಾತಿ ಜಾರಿ, ಮನೆ ನಿವೇಶನ, ಬಗರ್ ಹುಕುಂ ಸಕ್ರಂ ಪರಬಾರೆ ಕೇಸುಗಳ ಶೀಘ್ರ ವಿಲೇವಾರಿ, ಭೂಮಿ ಹೋರಾಟ, ದಲಿತರ ಮೇಲಿನ ದೌರ್ಜನ್ಯ ತಡೆಯಲು, ಜಾತಿ ಪದ್ಧತಿ ಮೇಲು ಕೀಳು ಪದ್ಧತಿ ಹೋಗಲಾಡಿಸಲು ನಿರುದ್ಯೋಗ ಸಮಸ್ಯೆ ಬಗೆಹರಿಸಲು ದಲಿತರ ರಾಜಕೀಯ ಅರಿವು ನೆರವು, ಮ್ಯಾನುಯಲ್ ಸ್ಕ್ಯಾವೆಂಜಾರ್ಸ, ಸಫಾಯಿ ಕರ್ಮಚಾರಿಗಳ ಪುನರವಸತಿ, ಪೌರಾ ಕಾರ್ಮಿಕರ ಸಮಸ್ಯೆಗಳು, ನೌಕರಿ ನೇಮಕಾತಿಗಳ ಕುರಿತು ಸ್ವಾಭಿಮಾನಿ ಸಂಘಟನೆಯ ಅನೇಕ ದಲಿತ ಮುಖಂಡರು ಅಭಿಮಾನಿಗಳು ಬಾಗಲಕೋಟೆ ಜಿಲ್ಲೆಯಿಂದ ಹರಿಹರದ ತಪೋವನಕ್ಕೆ ತೆರಳುವದಾಗಿ ತಿಳಿಸಿದರಲ್ಲದೆ ಪ್ರೊ, ಬಿ.ಕೃಷ್ಣಪ್ಪ ನವರ ಸ್ಥಾಪಿತ ಸಂಘಟನೆಯು ರಾಜ್ಯದಲ್ಲಿ ದಲಿತರ ಶೋಷಿತರ ಏಳ್ಗೆಗಾಗಿ ಶ್ರಮಿಸುತ್ತಿದ್ದೂ ಸಂಘಟನೆಯ ಹೋರಾಟದ ಹಾದಿಯನ್ನು ಶುಭದ್ರವಾಗಿ ನಾವೆಲ್ಲರೂ ಕಟ್ಟೋಣ ಕಾರ್ಯಗಾರದಲ್ಲಿ ಪಾಲ್ಗೊಳ್ಳೋಣ ಎಂದರು. ಪತ್ರಿಕಾ ಗೋಷ್ಠಿಯಲ್ಲಿ ಬೆಳಗಾವಿ ವಿಭಾಗೀಯ ಸಂಚಾಲಕರು ಹಣಮಂತ. ಎಚ್ ಹೀರೆಮನಿ, ಬಾಗಲಕೋಟೆ ಜಿಲ್ಲಾ ಸಂಚಾಲಕರು ಬಿ.ಯಶೋಧರ ಸಂಗಮ, ಬಾಗವಹಿಸಿದ್ದರೆಂದು ಜಿಲ್ಲಾ ಸಂಘಟನಾ ಸಂಚಾಲಕರು ಯಮನೂರ ಹಲಗಿ ತಿಳಿಸಿದರು.

## ತಾಲೂಕಿನಲ್ಲಿ ದಿನಕ್ಕೊಂದು ಸಮಸ್ಯೆ ಹೆಚ್ಚುತ್ತಿದೆ–ಹೋರಾಟಗಾರರ ಆಕ್ರೋಶ



**ಸಿಹಿ ಕಹಿ ಸುದ್ದಿ**

**ಮಾನ್ವಿ** : ಲೋಕೋಪಯೋಗಿ ಇಲಾಖೆ ಎ.ಇ.ಇ ಸಾಮುವೇಲಪ್ಪನ ದುರಾಡಳಿತ ಹೆಚ್ಚುತ್ತಿದ್ದರಿಂದ ಜಾಗೀರಪನ್ನೂರು ಗ್ರಾಮಸ್ಥರು ನಮಗೆ ರಸ್ತೆ ನಿರ್ಮಿಸಿ ಕೊಡಬೇಕು ಎಂದು ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಶಾಸಕರ ಭವನದ ಮುಂದೆ ಪ್ರತಿಭಟನೆ ನಡೆಸಿ ನಮ್ಮ ಬೇಡಿಕೆ ಈಡೇರುವವರೆಗೂ ನಾವು ಕದಲುವುದಿಲ್ಲ. ಹಾಗೆಯೇ ಮಾನ್ವಿ ಲೋಕೋಪಯೋಗಿ ಇಲಾಖೆಗೆ ಚೀಕಲಪರ್ವಿಟು ಜಾಗೀರಪನ್ನೂರು ಗ್ರಾಮದ ರಸ್ತೆ ನಿರ್ಮಿಸಬೇಕು ಎಂದು ಲೋಕೋಪಯೋಗಿ ಇಲಾಖೆಯ ಎ.ಇ.ಇ ಸಾಮುವೇಲಪ್ಪ ಅವರಿಗೆ ಮನವಿ ಸಲ್ಲಿಸಿದರೂ ಬೆಲೆ ಇಲ್ಲದಂತಾಗಿದೆ ಎಂದು ದಲಿತ ಸಂಘರ್ಷ ಸಮಿತಿ ಮುಖಂಡ ಸದಾನಂದ ಪನ್ನೂರು ಕಿಡಿಕಾರಿದರು.

ನಮ್ಮೂರಿನ ಮೋಡಗುಂಟ ಹಳ್ಳದ ಸೇತುವೆ ನಿರ್ಮಾಣ ಮಾಡಬೇಕೆಂದು ಹಾಗು ರೈತರ ಜಮೀನುಗಳಿಗೆ ಕಾಲು ದಾ–ರಿಯಾಗಿ ಹೋಗಲು ರಸ್ತೆ ನಿರ್ಮಾಣ ಮಾಡಬೇಕು ಎಂದು ತಾಲೂಕಾಡಳಿತಕ್ಕೆ ಮನವಿ ಸಲ್ಲಿಸಿದರು ಸಹ ಪ್ರಯೋಜನ ಇಲ್ಲದಂತಾಗಿದೆ ಎಂದು ಅಬ್ರಾಹಂ ಪನ್ನೂರು ಆಕ್ರೋಶ ವ್ಯಕ್ತಪಡಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ. ನಕ್ಕುಂದಿ.ಮಾನ್ವಿ**

## ಚೆಸ್ ಸ್ಪರ್ಧೆಯಲ್ಲಿ – ರಾಷ್ಟ್ರ ಮಟ್ಟಕ್ಕೆ ಆಯ್ಕೆ



**ಸಿಹಿ ಕಹಿ ಸುದ್ದಿ**

**ರೋಣ** : ಪಟ್ಟಣದ ನ್ಯೂ ಲಿಟಲ್ ಫ್ಲವರ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಎಂಟನೇ ತರಗತಿಯ ವಿದ್ಯಾರ್ಥಿ ವೈಭವ ಬಸವರಾಜ ಸಂಗನಬಶೆಟ್ಟರ ರಾಜ್ಯ ಮಟ್ಟದ ಚೆಸ್ ಸ್ಪರ್ಧೆಯಲ್ಲಿ ವಿಜಯ ಶಾಲಿಯಾಗಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಮುಂದೆ ಮಹಾರಾಷ್ಟ್ರದಲ್ಲಿ ನಡೆಯುವ ರಾಷ್ಟ್ರ ಮಟ್ಟದ ಚೆಸ್ ಸ್ಪರ್ಧೆಯಲ್ಲಿ ಕರ್ನಾಟಕ ವಿದ್ಯಾರ್ಥಿ ವೈಭವ ಬಸವರಾಜ ಸಂಗನಬಶೆಟ್ಟರ ರಾಜ್ಯದಿಂದ ಪ್ರತಿ ನಿಧಿಸುತ್ತಿದ್ದಾನೆ.

ರೋಣ ಬಿ.ಇ.ಓ ತಾಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಅಧ್ಯಕ್ಷರು, ಶರಣರ ಶಿಕ್ಷಣ ಸಮಿತಿ ಸಹಯೋಗ ದೊಂದಿಗೆ ವಿದ್ಯಾರ್ಥಿಗೆ ಸನ್ಮಾನಿಸಿ ರಾಷ್ಟ್ರ ಮಟ್ಟದಲ್ಲಿ ವಿಜಯ ಶಾಲಿಯಾಗಿ ಹೊರ ಹೊಮ್ಮಲಿ ಎಂದು ಶುಭ ಹಾರೈಸಲಾಯಿತು.

ನ್ಯೂ ಲಿಟಲ್ ಫ್ಲವರ್ ಶಾಲೆಯ ಅಧ್ಯಕ್ಷರು, ಸದಸ್ಯರು, ಶರಣ–ರ ಶಿಕ್ಷಣ ಸಮಿತಿ ರೋಣ ಸಂಸ್ಥೆಯ ಆಡಳಿತಾಧಿಕಾರಿಗಳು, ಮುಖ್ಯೋಪಾಧ್ಯಾಯರು, ದೈಹಿಕ ಶಿಕ್ಷಕರು ಸಿಬ್ಬಂದಿ, ಪಾಲಕರು, ಸಂತಸ ಪಟ್ಟಿದ್ದಾರೆ. ಇಂತಹ ಪ್ರತಿಭಾನ್ವಿತ ವಿದ್ಯಾರ್ಥಿಗೆ ನಾವು ನೀವೆಲ್ಲರು ಸದಾ ಕಾಲ ಪ್ರೋತ್ಸಾಹ ನೀಡೋಣ ಎಂಬುದು ನಮ್ಮ ಸಿಹಿ ಕಹಿ ಕನ್ನಡ ದಿನ ಪತ್ರಿಕೆಯ ಅಭಿಮತವಾಗಿದೆ.

**ಗದಗ ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಎಸ್.ವಿ ಸಂಕನಗೌಡ್ರ ರೋಣ ಗದಗ**



# ರೈತರು ಸಾವಯವ ಕೃಷಿಗೆ ಒತ್ತು ನೀಡಬೇಕು: ಶಾಸಕ ಕೆ.ರಾಘವೇಂದ್ರ ಹಿಟ್ನಾಳ

**ಕೊಪ್ಪಳ :** ಇತ್ತೀಚೆಗೆ ಸಿರಿಧಾನ್ಯಗಳಿಗೆ ಬೇಡಿಕೆ ಹೆಚ್ಚುತ್ತಿರುವುದರಿಂದ ರೈತರು ಸಾವಯವ ಬೆಳೆಗಳನ್ನು ಬೆಳೆಯಲು ಒತ್ತು ನೀಡಬೇಕು ಮತ್ತು ಇದಕ್ಕೆ ಕೃಷಿ ಇಲಾಖೆಯವರು ಪ್ರೋತ್ಸಾಹ ನೀಡಬೇಕೆಂದು ಕೊಪ್ಪಳ ಕ್ಷೇತ್ರದ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ಅವರು ಜಿಲ್ಲಾಡಳಿತ. ಜಿಲ್ಲಾ ಪಂಚಾಯತ. ಕೃಷಿ ಇಲಾಖೆ ಕೊಪ್ಪಳ ಇವರ ಸಹಯೋಗದಲ್ಲಿ ಕೊಪ್ಪಳ ನಗರದ ಮಧುಶ್ರೀ ಗಾರ್ಡನಲ್ಲಿ ಹಮ್ಮಿಕೊಳ್ಳಲಾಗಿದ್ದ ಜಿಲ್ಲಾ ಮಟ್ಟದ ಸಾವಯವ ಮತ್ತು ಸಿರಿಧಾನ್ಯ ಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಮ್ಮ ಹಿರಿಯರು ಸಿರಿಧಾನ್ಯಗಳನ್ನು ಸೇವಿಸುತ್ತಿರುವುದರಿಂದಲೆ ಅವರು 80 ರಿಂದ 90 ವರ್ಷಗಳ ಕಾಲ ಬದುಕುತ್ತಿದ್ದರು. ಆದರೆ ಇಂದು ನಾವು ಹೆಚ್ಚಿನ ಇಳುವರಿ ಪಡೆಯಲು ಶೇ. 60 ಕ್ಕಿಂತಲೂ ಹೆಚ್ಚು ರಾಸಾಯನಿಕ ಗೊಬ್ಬರವನ್ನು ನಮ್ಮ ಹೊಲಗಳಿಗೆ ಹಾಕುತ್ತಿದ್ದೆವೆ. ಇದರಿಂದ ನಮಗೆ ಬಿ.ಪಿ ಮತ್ತು ಶುಗರ್ ಸೇರಿದಂತೆ ಹಲವಾರು ಕಾಯಿಲೆಗಳು ಬರುವದರ ಜೊತೆಗೆ ನಮ್ಮ ಜೀವನಾಂಶವು ಕಡಿಮೆಯಾಗಿದೆ ಎಂದರು. ಸರಕಾರ ರೈತರಿಗಾಗಿ ಹನಿ ನೀರಾವರಿ. ಕೃಷಿ ಹೊಂಡಗಳ ನಿರ್ಮಾಣ. ಸೇರಿದಂತೆ ಹಲವಾರು ಯೋಜನೆಗಳನ್ನು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಮೂಲಕ ರೈತರಿಗೆ ನೀಡುತ್ತಿದೆ. ಇಂದು ಕೃಷಿಯಲ್ಲಿ ಅನೇಕ ಹೊಸ ತಂತ್ರಜ್ಞಾನಗಳು ಬೆಳೆದಿವೆ. ಜಿಲ್ಲೆಯಲ್ಲಿ ರೈತರಿಗೆ ನೀರಾವರಿ ಮಾಡಲು ಮೂರು ಏತ ನೀರಾವರಿ ಯೋಜನೆಗಳ ಕೆಲಸ ಮಾಡುತ್ತಿದ್ದೆವೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಮಾತನಾಡಿ ಜಗತ್ತು ಇಂದು ಸಿರಿಧಾನ್ಯಗಳ ಕಡೆಗೆ ದಾಪುಗಾಲು ಹಾಕುತ್ತಿದೆ. ಇವುಗಳಿಂದ ಬಿ.ಪಿ. ಶುಗರ್. ಕ್ಯಾನ್ಸರ್ ನಂತಹ ಹಲವಾರು ಕಾಯಿಲೆಗಳು ವಾಸಿಮಾಡುವ ಶಕ್ತಿ



ಅವುಗಳಿಗಿದೆ. ನಮ್ಮ ಹಿಂದಿನ ಆಹಾರ ಪದ್ಧತಿ ಮತ್ತೆ ಮರಳಿ ಬರುತ್ತಿದೆ. ಸಿರಿಧಾನ್ಯ ಬೆಳೆಗಳಾದ ಸಜ್ಜೆ. ನವಣೆ. ಬರಗು ಸೇರಿದಂತೆ ಇತರೆ ಆಹಾರ ಸೇವನೆಯಿಂದ ನಾವು ಉತ್ತಮ ಆರೋಗ್ಯವಂತರಾಗಿರುತ್ತೇವೆ. ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು ಎಂದು ಹೇಳಿದರು.

ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಮಾತನಾಡಿ, ಕೃಷಿ ಇಲಾಖೆಯು ಸಿರಿಧಾನ್ಯ ಮೇಳ ಒಳ್ಳೆಯ ಕಾರ್ಯಕ್ರಮ ಹಮ್ಮಿಕೊಂಡಿದೆ. ನಾನು ರೈತನ ಮಗ ಆಗಿರುವುದರಿಂದ ರೈತರ ಕಷ್ಟ ನನಗೂ ಗೊತ್ತಿದೆ. ರೈತ ನಮ್ಮ ಅನ್ನದಾತ ಅವನಿಲ್ಲದಿದ್ದರೆ ನಮ್ಮ ಜೀವನ ಇಲ್ಲ. ರೈತರಿಗೆ ಕೃಷಿಯ ಬಗ್ಗೆ ಮಾಹಿತಿ ನೀಡುವ ಹಲವಾರು ಕಾರ್ಯಕ್ರಮಗಳನ್ನು ತಮ್ಮ ಇಲಾಖೆಯಿಂದ ಆಯೋಜನೆ ಮಾಡಬೇಕೆಂದು ಹೇಳಿದರು.

ಗಂಗಾವತಿಕೃಷಿವಿಜ್ಞಾನಕೇಂದ್ರದವಿಜ್ಞಾನಿಕವಿತಾಹುಳ್ಳಿಕಾಶಿಅವರುವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಸಿರಿಧಾನ್ಯಗಳು ಆರೋಗ್ಯ ದೃಷ್ಟಿಯಿಂದ ಅಪಾರ ಮಹತ್ವವನ್ನು ಹೊಂದಿವೆ. ನವಣೆಯಿಂದ ತಯಾರಿಸಿದ ಆಹಾರವನ್ನು ಸೇವಿಸುವುದರಿಂದ ಸಕ್ಕರೆ ಕಾಯಿಲೆ, ರಕ್ತದೊತ್ತಡ ಮತ್ತು ನರ ದೌರ್ಬಲ್ಯವನ್ನು ನಿಯಂತ್ರಿಸಬಹುದು. ಸಿರಿಧಾನ್ಯಗಳು ಪೌಷ್ಠಿಕತೆಯಿಂದ ಸಮೃದ್ಧವಾಗಿದ್ದು, ಹೃದಯ ರೋಗ, ಮಧುಮೇಹ ನಿಯಂತ್ರಣ ಮತ್ತು ತೂಕ ಸಮತೋಲನಕ್ಕೆ ಸಹಾಯ ಮಾಡುತ್ತವೆ. ಈ ಆಹಾರಗಳ ಉಪಯುಕ್ತತೆಯನ್ನು ರೈತರಲ್ಲಿ ಜಾಗೃತಿಪಡಿಸುವುದು ಅತ್ಯಂತ ಅಗತ್ಯವಾಗಿದೆ. ಸುಧಾರಿತ ತಂತ್ರಜ್ಞಾನಗಳ ಉಪಯೋಗದ ಮೂಲಕ ಸಿರಿಧಾನ್ಯ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಪ್ರಯತ್ನಿಸಬೇಕು. ಜೊತೆಗೆ, ಸಿರಿಧಾನ್ಯ ಬೆಳೆಗಳ ಮಾರುಕಟ್ಟೆ ಬೆಲೆ ಹೆಚ್ಚಿಸಲು ಮೌಲ್ಯವರ್ಧನೆ ಕುರಿತು ಅರಿವು ಮೂಡಿಸುವುದು ಬಹುಮುಖ್ಯವಾಗಿದೆ ಎಂದರು.

ಕೃಷಿಇಲಾಖೆಜಂಟಿನಿರ್ದೇಶಕರುದ್ರೇಶಪ್ಪಟಿ.ಎಸ್ಅವರುಪ್ರಾಸ್ತಾವಿಕವಾಗಿ ಮಾತನಾಡಿ, ಜನರಲ್ಲಿ ಸಿರಿಧಾನ್ಯಗಳ ಬಗ್ಗೆ ಅರಿವು ಮೂಡಿಸಲು ಕೃಷಿ ಇಲಾಖೆಯಿಂದ ಪ್ರತಿ ಜಿಲ್ಲೆಯಲ್ಲಿ ಸಾವಯವ ಮತ್ತು ಸಿರಿಧಾನ್ಯ ಮೇಳವನ್ನು ಹಮ್ಮಿಕೊಳ್ಳಲಾಗುತ್ತಿದೆ. ಜಿಲ್ಲಾ ಮಟ್ಟದ ಸಾವಯವ ಮತ್ತು ಸಿರಿಧಾನ್ಯ ಮೇಳದಲ್ಲಿ ಗುಣಮಟ್ಟದ ವಸ್ತು ಪ್ರದರ್ಶನಗಳು, ಉತ್ಪಾದಕರ–ಮಾರುಕಟ್ಟೆದಾರರ ಸಭೆಗಳು, ಸಾವಯವ ಆಹಾರ ಮಳಿಗೆಗಳು ಮತ್ತು ಬಳಕೆದಾರರೊಂದಿಗೆ ಸಂಪರ್ಕ, ಈ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅರಿವು ಮೂಡಿಸಲಾಗುತ್ತಿದೆ. ಸಾವಯವ ಕೃಷಿಯ ಒಟ್ಟಾರೆ ಅಭಿವೃದ್ಧಿಗೆ ಪೂರಕವಾಗಿದ್ದು, ಸಿರಿಧಾನ್ಯಗಳ ಬಗ್ಗೆ ಜಾಗೃತಿ ಮೂಡಿಸಲು ರಾಜ್ಯ ಸರ್ಕಾರವು ಜನವರಿ 23 ರಿಂದ 25 ರವರೆಗೆ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಸಿರಿಧಾನ್ಯ ಮೇಳವನ್ನು ಹಮ್ಮಿಕೊಳ್ಳುತ್ತಿದ್ದು, ಇದರಲ್ಲಿ ಇತರೆ 10 ದೇಶಗಳು ಹಾಗೂ ನಮ್ಮ ದೇಶದ 20 ರಾಜ್ಯಗಳ ರೈತರು ಸೇರಿದಂತೆ ಹಲವಾರು ಜನರು ಭಾಗವಹಿಸುತ್ತಿದ್ದಾರೆ ಎಂದರು.

**ಕೈಪಿಡಿ ಬಿಡುಗಡೆ:** 'ಸಿರಿಧಾನ್ಯಗಳ ಅಧಿಕ ಉತ್ಪಾದನೆಗೆ ಸುಧಾರಿತ ತಾಂತ್ರಿಕತೆಗಳು ಹಾಗೂ ಮೌಲ್ಯವರ್ಧನೆ' ಕುರಿತ ಕೃಷಿ ಇಲಾಖೆಯಿಂದ ಸಿದ್ದಪಡಿಸಲಾದ ಕೈಪಿಡಿಯನ್ನು ಸಮಾರಂಭದಲ್ಲಿ ಬಿಡುಗಡೆ ಮಾಡಲಾಯಿತು.

**ಗಮನ ಸೆಳೆದ ಪ್ರದರ್ಶನ ಮಳಿಗೆಗಳು:** ಸಾವಯವ ಮತ್ತು ಸಿರಿಧಾನ್ಯ ಮೇಳ ಕಾರ್ಯಕ್ರಮದ ನಿಮಿತ್ತ ಸಿರಿಧಾನ್ಯಗಳು ಮತ್ತು ಅವುಗಳಿಂದ ತಯಾರಿಸಲ್ಪಟ್ಟ ಖಾದ್ಯಗಳು ಹಾಗೂ ಸಾವಯವ ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳು ಸಾರ್ವಜನಿಕರ ಗಮನ ಸೆಳೆದವು. ಇದರ ಜೊತೆಗೆ ಕೃಷಿಗೆ ಸಂಬಂಧಿಸಿದ ಯಂತ್ರೋಪಕರಣಗಳನ್ನು ಪ್ರದರ್ಶನಕ್ಕಿರಿ ಅವುಗಳ ಖರೀದಿಗಾಗಿ ರೈತರಿಗೆ ಇರುವ ಸಹಾಯಧನ ಸೌಲಭ್ಯಗಳ ಮಾಹಿತಿಯನ್ನು ಸಹ ನೀಡಲಾಯಿತು. ರೈತ ಹಾಗೂ ರೈತ ಮಹಿಳೆಯರ ಉಡುಪುಗಳನ್ನು ಧರಿಸಿದ ಬಾಲ ಪ್ರತಿಭೆಗಳು ಕಾರ್ಯಕ್ರಮದಲ್ಲಿ ನೋಡುಗರ ವಿಶೇಷ ಗಮನ ಸೆಳೆದರು. ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ರಾಮ್ ಎಲ್ ಅರಸಿದ್ದಿ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಉಕ್ಕುಂದ, ಪಶು ಇಲಾಖೆ ಉಪನಿರ್ದೇಶಕ ಡಾ. ಪಿ.ಎಂ.ಮಲ್ಲಯ್ಯ, ಗಂಗಾವತಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ರಾಘವೇಂದ್ರ ಎಲಿಗಾರ, ರಾಯಚೂರಿನ ಕೃಷಿ ವಿಶ್ವ ವಿದ್ಯಾಲಯದ ಆಡಳಿತ ಮಂಡಳಿ ಸದಸ್ಯ ತಿಮ್ಮಣ್ಣ ಚೌಡಿ, ಕೊಪ್ಪಳ ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷರಾದ ಸಣ್ಣ ಹನುಮಪ್ಪ ಹುಳ್ಳಿ, ಮಾಜಿ ಜಿ.ಪಂ ಸದಸ್ಯರಾದ ರಾಮಣ್ಣ ಚೌಡಕಿ ಹಾಗೂ ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಆಗಮಿಸಿದ ರೈತರು, ಕೃಷಿ ಸಖಿಯರು, ಸಹಾಯಕ ಕೃಷಿ ಸಖಿಯರು ಸೇರಿದಂತೆ ಕೃಷಿ ಇಲಾಖೆಯ ಇತರೆ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಮತದಾರರಲ್ಲಿ ಅರಿವು ಮೂಡಿಸುವ ಕೆಲಸ ಇನ್ನೂ ಹೆಚ್ಚಿನ ರೀತಿಯಲ್ಲಿ ಆಗಬೇಕಿದೆ: ಸಿಇಓ ರಾಹುಲ್ ರತ್ನಂ ಪಾಂಡೇಯ

**ಕೊಪ್ಪಳ :** ಮತದಾರರ ಜಾಗೃತಿ ಕುರಿತು ಇನ್ನೂ ಹೆಚ್ಚಿನ ರೀತಿಯಲ್ಲಿ ಅರಿವು ಮೂಡಿಸುವ ಕೆಲಸ ಆಗಬೇಕಿದೆ ಹಾಗಾಗಿ ಪ್ರತಿ ವರ್ಷ ಜನವರಿ 25 ರಂದು ರಾಷ್ಟ್ರೀಯ ಮತದಾರರ ದಿನವನ್ನಾಗಿ ಆಚರಿಸಲಾಗುತ್ತದೆ ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಹೇಳಿದರು.

ಅವರು ಶುಕ್ರವಾರ ಜಿಲ್ಲಾ ಪಂಚಾಯತ ಸಮಿತಿ ಸಭಾಂಗಣದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಕರೆದ 15ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜನವರಿ 25 ರಂದು ಬೆಳಿಗ್ಗೆ 10 ಗಂಟೆಗೆ ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ 15ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ ಉತ್ತಮ ರೀತಿಯಲ್ಲಿ ಆಯೋಜನೆ ಮಾಡಬೇಕು. ಅಂದು ಬೆಳಿಗ್ಗೆ 9 ಗಂಟೆಗೆ ಕೊಪ್ಪಳ ನಗರದ ತಾಲ್ಲೂಕು ಕ್ರೀಡಾಂಗಣದಲ್ಲಿ ಮತದಾರರ ಜಾಗೃತಿ ಕುರಿತು ಬೃಹತ್




ಮಾನವ ಸರಪಳಿ ನಿರ್ಮಿಸಬೇಕು. ಮತದಾರರ ಜಾಗೃತಿ ಕಾರ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಬಿಎಲ್ಓ ಹಾಗೂ ಸುಪರವೈಜರ್ ಮತ್ತು ಇ.ಎಲ್.ಸಿ ಸಂಯೋಜಕರು ಸೇರಿದಂತೆ ಇತರರಿಗೆ ಸನ್ಮಾನಿಸಬೇಕು. ಶೇ. 100 ಪ್ರತಿಶತ ಮತದಾನವಾದ ಜಿಲ್ಲೆಯ ಯಾವುದಾದರೂ ತಾಂಡಾ ಹಾಗೂ ಗ್ರಾಮಗಳಿದ್ದರೆ ಅಂತವುಗಳನ್ನು ಗುರುತಿಸಿ ಎಂದು ಹೇಳಿದರು.

ಈ ವರ್ಷ 'ಮತದಾನಕ್ಕಿಂತ ಇನ್ನೊಂದಿಲ್ಲ. ನಾನು ಖಚಿತವಾಗಿ ಮತದಾನ ಮಾಡುವೆ' ಎಂಬ ವಿಶೇಷ ಧ್ಯೇಯವಾಕ್ಯದೊಂದಿಗೆ 15ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮ 2025ರ ಜನವರಿ 25 ರಂದು ಆಚರಿಸುವ ಸಂಬಂದ ಭಾರತ ಚುನಾವಣಾ ಆಯೋಗ ನಿರ್ದೇಶನ ನೀಡಿದ್ದು, ಈ ಸಂಬಂಧ ಜಿಲ್ಲಾ, ತಾಲ್ಲೂಕು ಮತ್ತು ಮತಗಟ್ಟೆಗಳ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಆಯೋಜನೆ ಮಾಡಬೇಕೆಂದು ಹೇಳಿದರು. ವಿವಿಧ ಶೈಕ್ಷಣಿಕ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಎನ್.ಸಿ.ಸಿ., ಎನ್.ಎಸ್.ಎಸ್. ಮತ್ತು ಸ್ಕೌಟ್ ಗೈಡ್ ಸೇರಿದಂತೆ ಇತರರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಬೇಕು. ಈ. ಕುರಿತು ಕ್ಷೇತ್ರ ಕಾರ್ಯಕ್ರಮ ಹಾಗೂ ಪರಸ್ಪರ ಸಂವಹನದ ಮೂಲಕ ವ್ಯಾಪಕ ಪ್ರಚಾರ ಹಮ್ಮಿಕೊಳ್ಳಬೇಕು. ವಿಶೇಷವಾಗಿ ಹೆಚ್ಚಿನ ಜನರು ಸೇರುವ ಜನ ಸಂದಣಿಯಂತಹ ಸ್ಥಳಗಳಲ್ಲಿ ಹೆಚ್ಚಿನ ಪ್ರಚಾರ ಆಗಬೇಕು ಮತ್ತು ಹೊಸದಾಗಿ ನೊಂದಣಿಯಾದ ಯುವ ಮತದಾರರಿಗೆ ಕಾರ್ಯಕ್ರಮದಲ್ಲಿ ಮತದಾರರ ಗುರುತಿನ ಚೀಟಿ ವಿತರಿಸಬೇಕು. ಮತದಾರರ ಜಾಗೃತಿ ಕುರಿತ ಪ್ರತಿಜ್ಞಾ ವಿಧಿಯನ್ನು ಭೋದಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಹೇಳಿದರು.

ಈ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ಪ್ರಕಾಶ ವಡ್ಡರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಶ್ರೀಶೈಲ್ ಬಿರಾದರ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ್, ಕೊಪ್ಪಳ ತಹಶಿಲ್ದಾರ ವಿಠ್ಠಲ್ ಚೌಗಲಾ, ಕೊಪ್ಪಳ ತಾ.ಪಂ ಇಓ ದುಂಡಪ್ಪ ತುರಾದಿ ಹಾಗೂ ಸ್ನಾತಕೋತ್ತರ, ವೈದ್ಯಕೀಯ, ತಾಂತ್ರಿಕ, ಡಿಪ್ಲೋಮಾ ವಿಭಾಗ ಹಾಗೂ ಪದವಿಪೂರ್ವ ಮತ್ತು ಪದವಿ ಹಂತದ ಇ.ಎಲ್.ಸಿ ಕೋಆರ್ಡಿನೇಟರಗಳು ಭಾಗವಹಿಸಿದ್ದರು.

# ಪರಿಸರ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆ: ಪದ್ಮಶ್ರೀ ಜಾದವ್ ಪಾಯಂಗ್



**ಕೊಪ್ಪಳ :** ಪರಿಸರ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆಯಾಗಿದೆ ಎಂದು ಪದ್ಮಶ್ರೀ ವಿಜೇತ ಜಾದವ್ ಪಾಯಂಗ್ ಹೇಳಿದರು. ಇಂದು ದಿನಾಂಕ 17.01.25ರಂದು ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಮಾತನಾಡಿದ ಅವರು ವಿದ್ಯಾರ್ಥಿಗಳು ಕೇವಲ ನಾಲ್ಕು ಗೋಡೆಯ ಒಳಗಡೆ ಕೂತು ಶಿಕ್ಷಣ ಕಲಿಯಬಾರದು, ಪ್ರಾಯೋಗಿಕವಾಗಿ ಕಲಿಯಬೇಕು ಎಂದು ಕರೆ ನೀಡಿದರು ಇದರ ಜೊತೆಗೆ ವಿದ್ಯಾರ್ಥಿಗಳು ಹೆಚ್ಚಾಗಿ ಗಿಡವನ್ನು ನೆಟ್ಟುವುದರ ಬಗ್ಗೆ ಗಮನಹರಿಸಬೇಕೆಂದು ಕರೆ ನೀಡಿದರು. ಕಾಲೇಜಿನ ಪ್ರಚಾರದ ಡಾ. ಚನ್ನಬಸವ ಎ. ಮಾತನಾಡಿ ವಿದ್ಯಾರ್ಥಿಗಳು ಭವ್ಯ ಭಾರತದ ನಿರ್ಮಾಣ ಮಾಡುವ ಕೆಲಸದಲ್ಲಿ ತೊಡಗಬೇಕು ಎಂದು ಹೇಳಿದರು.


ನಂತರ ಮಹಾವಿದ್ಯಾಲಯದ ಆವರಣದಲ್ಲಿ ಜಾದವ್ ಪಾಯಂಗ್ ಅವರು ಸಸಿ ನಟ್ಟು ನಿರುಣಿಸಿದರು. ಈ ಕಾರ್ಯಕ್ರಮದಲ್ಲಿ ಎನ್.ಸಿ.ಸಿ ಅಧಿಕಾರಿ ದಯಾನಂದ ಸಾಳವಂಕಿ, ಎನ್.ಎಸ್.ಎಸ್ ಅಧಿಕಾರಿಗಳಾದ ಡಾ. ಜಾಲಿಹಾಳ ಶರಣಪ್ಪ ಮತ್ತು ಶರಣಪ್ಪ ಚೌಹಾಣ್, ಐಕ್ಯೂಎಸಿ ಸಂಯೋಜಕರಾದ ಡಾ. ಅರುಣ್ ಕುಮಾರ್ ಮತ್ತು ಕಾಲೇಜಿನ ಪ್ರಾಧ್ಯಾಪಕರಾದ ವೆಂಕಟೇಶ್ ಬೋವಿ, ಮಂಜುನಾಥ್ ಹಿರೇಮಠ್ ಅಮರೇಶ್ ತಳುವಗೇರಿ, ಕನಕರಾಯ ಗೊಂಡಬಾಳ್, ಮಂಜುನಾಥ ಹಿರೇಮಠಹಾಜರಿದ್ದರು. ಈ ಕಾರ್ಯಕ್ರಮದಲ್ಲಿ ಕಾಲೇಜಿನ ಎನ್.ಎಸ್.ಎಸ್ ಎನ್ಸಿಸಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಯಶಸ್ವಿಯಾಗೋಕೆ ಎಷ್ಟು ತಾಸು ಕೆಲಸ ಮಾಡಬೇಕು? ಎಲ್ಲರಿಗೂ ಒಂದೇ ಲಾಜಿಕ್ ವರ್ಕ್ ಆಗುತ್ತಾ?

ವಾರಕ್ಕೆ ಎಷ್ಟು ತಾಸುಗಳ ಕೆಲಸ ಒಳ್ಳೆಯದು? ಅರವತ್ತು ತಾಸುಗಳಾ, ಎಪ್ಪತ್ತಾ? ಈ ಚರ್ಚೆಯಿಂದ ತಪ್ಪಿಸಿಕೊಳ್ಳಹೊರಟವರೆಲ್ಲ ಸೋಮಾರಿಗಳಾ? ಈ ಬಗ್ಗೆ ಸಕಾರಾತ್ಮಕ ಧ್ವನಿ ಸೇರಿಸುತ್ತಿರುವವರೆಲ್ಲ ಮಹತ್ತಾದದನ್ನು ಸಾಧಿಸುತ್ತಿರುವವರಾ? ಇದು ಇತ್ತೀಚಿಗಿನ ತೀವ್ರ ಚರ್ಚೆಗಳಲ್ಲೊಂದು. ಭಾರತ ಪ್ರಗತಿಯಾಗಬೇಕೆಂದರೆ ಎಪ್ಪತ್ತು ತಾಸುಗಳ ಕೆಲಸ ಮಾಡಬೇಕು ಎಂದು ನಾರಾಯಣಮೂರ್ತಿಯವರು ಹೇಳಿದ್ದು ಮೊದಲಿಗೆ ಚರ್ಚೆಯಾಯಿತು. ನಂತರ, "ಭಾನುವಾರ ಹೆಂಡತಿಯ ಮುಖವನ್ನು ಗುರಾಯಿಸಿಕೊಂಡಿರುವುದಕ್ಕಿಂತ ಆ ದಿನವೂ ಕಚೇರಿಗೆ ಬಂದು ಕೆಲಸ ಮಾಡುವುದು ಒಳ್ಳೆಯದು" ಎಂಬರ್ಥದಲ್ಲಿ ಎಲ್ ಆ?ಯಂಡ್ ಟಿ ಚೇರ್ಮನ್ ಸುಬ್ರಮಣ್ಯನ್ ಹೇಳಿದ ಮಾತುಗಳು ಹಲವು ತಮಾಷೆ ಚಿತ್ರ (ಮೀಮ್)ಗಳಿಗೆ ದಾರಿ ಮಾಡಿಕೊಟ್ಟಿತು.

ಇಲ್ಲೊಂದು ಸ್ವಾರಸ್ಯ ಗಮನಿಸಬೇಕು. ಎರಡು ಬಗೆಯ ಜನ ಈ ಚರ್ಚೆಯಲ್ಲಿ ವ್ಯಸ್ತರಾಗಿದ್ದಾರೆ. ಮೂರ್ತಿ, ಸುಬ್ರಮಣ್ಯನ್, ಅನುಪಮ್ ಮಿತ್ತಲ್ ಹೀಗೆ ವೃತ್ತಿಯ ಉತ್ತುಂಗ ಬಿಂದುವಿನಲ್ಲಿ ಇರುವವರು ಒಂದು ಕಡೆ. ಈ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿರುವ ಇನ್ನೊಂದು ತುದಿ ಅದು ಈ ಲೇಖನ ಓದುತ್ತಿರಬಹುದಾದ ಹೆಚ್ಚಿನವರು. ಅಂದರೆ ನಗರಗಳಲ್ಲಿ ತಿಂಗಳ ಸಂಬಳದಲ್ಲಿದ್ದುಕೊಂಡು, ಇದುವರೆಗೆ ಹೆಚ್ಚಾದ ಐದು–ಹತ್ತು ಶೇಕಡದ ವಾರ್ಷಿಕ ಸಂಬಳ ಏರಿಕೆಗಳನ್ನು ನೆನಪಿಸಿಕೊಂಡು, ಇನ್ನು ಇಷ್ಟಾಗಿಬಿಟ್ಟರೆ ನಾನೂ ಒಂದು ಬಾಸ್ ಲೆವಲ್ಲಿಗೆ ಹೋಗಿಬಿಡುತ್ತೇನೆಂಬ ಆಸೆಯಲ್ಲಿರುವವರು.

ಉಳಿದಂತೆ, ಬೆಳಗ್ಗೆ ನಾಲ್ಕೂವರೆ–ಐದಕ್ಕೆಲ್ಲ ಸಾಮಾನು ಸರಂಜಾಮುಗಳನ್ನು ಖಾತ್ರಿಪಡಿಸಿಕೊಂಡು ಆ ದಿನದ ವಹಿವಾಟಿಗೆ ಸಿದ್ಧನಾಗುವ ಹೊಟೇಲಿಗನಾಗಲೀ, ಇವತ್ತು ಕೆಲಸಗಾರರು ಬಂದರೆ ದೊಡ್ಡ ಕೆಲಸಕ್ಕೆ ಕೈಹಾಕೋಣ–ಇಲ್ಲದಿದ್ದರೆ ವೈಯಕ್ತಿಕವಾಗಿ ಸಾಧ್ಯವಾಗುವ ಕೆಲಸ ಮಾಡೋಣ ಎಂದು ನಿರ್ಧರಿಸಿಕೊಂಡು ದಿನವನ್ನು ಎದುರುಗೊಳ್ಳುವ ಕೃಷಿಕನಾಗಲೀ, ಇದೊಂದು ಬೋಲ್ಟ್ ವಿನ್ಯಾಸವನ್ನು ಇಷ್ಟೇ ಬದಲಿಸಿದ್ದೇ ಆದರೆ ಅದು ಬಾಹ್ಯಾಕಾಶಕ್ಕೆ ತೆರಳುವ ಪರಿಕರದ ಕಾರ್ಯಕ್ಷಮತೆಯನ್ನು ಹೇಗೆಲ್ಲ ಸುಧಾರಿಸಬಹುದು ಎಂದು ವ್ಯಸ್ತನಾಗಿರುವ ಇಸ್ರೊದ ತಂತ್ರಜ್ಞೆಯಾಗಿರಲಿ? ಇಂಥ ಎಷ್ಟೋ ಕೆಲಸಗಳಲ್ಲಿರುವವರು ಇವತ್ತು ಎಷ್ಟು ತಾಸು ಕೆಲಸ ಮಾಡಿದೆ ಎಂದು ಲೆಕ್ಕಾಚಾರಕ್ಕೂ ಇಳಿಯುವುದಿಲ್ಲ, ಈ ಚರ್ಚೆಗಳೆಲ್ಲ ಅವರನ್ನು ಪರ–ವಿರೋಧಗಳ ನೆಲೆಯಲ್ಲಿ ಆಕರ್ಷಿಸುವುದೂ ಇಲ್ಲ. ಅವರೊಂದು ಬೇರೆಯದೇ ಜೋನ್. ಹೊಟ್ಟೆ–ಬಟ್ಟೆಗಾಗುವ ದುಡಿಮೆ ಖಂಡಿತ ಅಲ್ಲೆಲ್ಲ ಇರುತ್ತದೆಯಾದರೂ, ಇವರ್ಯಾರೂ ತಮ್ಮ ಯಶಸ್ಸನ್ನು ಕೇವಲ




ವಾರ್ಷಿಕ ಆದಾಯದ ಮಾನದಂಡದಲ್ಲಷ್ಟೇ ಅಳೆದುಕೊಳ್ಳುವವರಲ್ಲ.

ಹೀಗಾಗಿ, ದಿನಕ್ಕೆ ಎಷ್ಟು ತಾಸುಗಳ ಕೆಲಸ ಮಾಡಬೇಕು ಎಂಬುದು ಹೀಗೆ ಒಂದು ಜೋನ್ ಅಲ್ಲಿ ದಾಖಲಾಗದೇ ಇರುವ ನಮ್ಮಂಥವರ ಸಮಸ್ಯೆ. ಇಂಥ ನಮ್ಮಂಥವರ ಸಂಖ್ಯೆ ದೊಡ್ಡದೇ ಇರುವುದರಿಂದ, "ಎಷ್ಟು ತಾಸುಗಳ ದುಡಿಮೆ ಉತ್ತಮ" ಎಂಬ ವಿಷಯವನ್ನು ಆ ಉಪದೇಶ ಮಾಡುತ್ತಿರುವವರ ನೆಲೆಯಿಂದಲೂ, ಉಪದೇಶ ಸ್ವೀಕರಿಸುತ್ತಿರುವ ನಮ್ಮಲ್ಲಿ ಹೆಚ್ಚಿನವರ ನೆಲೆಯಿಂದಲೂ ಗಮನಿಸೋಣ.

**ಇನ್ಫಿ, ಎಲ್ ಆ್ಯಂಡ್ ಟಿ ಮುಖ್ಯಸ್ಥರ ವಿಭಿನ್ನ ನೆಲೆ**

ನಾರಾಯಣಮೂರ್ತಿ ಅಥವಾ ಅವರಂಥ ಹಲವು ಸಾಧಕರು ಸುಮ್ಮನೇ ಮಾತಾಡುವವರು ಎಂದೇನಲ್ಲ. ಅವರ ಸಾಧನೆ–ಸಮರ್ಪಣೆಗಳು ದೊಡ್ಡದಿವೆ, ಭಾರತದಲ್ಲಿ ಮಧ್ಯಮವರ್ಗದ ವ್ಯಾಪ್ತಿ ವಿಸ್ತರಿಸುವಲ್ಲಿ ಇಂಥವರ ಕೊಡುಗೆ ಇದೆ. ಹಾಗಂತ ನಾರಾಯಣಮೂರ್ತಿಯವರು ವಾರಕ್ಕೆ 70 ತಾಸು ದುಡಿಯಲು ಹೇಳಿರುವುದು ಅವರದ್ದೇ ಇನ್ಫೋಸಿಸ್ ಸಂಸ್ಥೆಯಲ್ಲಿ ಕೆಲಸ ಮಾಡಲು ಬಂದಿರುವವರ ಬದುಕಿಗೆ ಅನ್ವಯವಾಗಬೇಕಿಲ್ಲ, ಹೆಚ್ಚಿನ ಸಂದರ್ಭಗಳಲ್ಲಿ ಆಗುವುದೂ ಇಲ್ಲ. ಎಪ್ಪತ್ತು ತಾಸು ಕೆಲಸ ಮಾಡಿದರೆ ಆ ಸಂಸ್ಥೆಯ ಸಿಇಒಗೆ ಸಿಗುವ ಸಂಬಳ–ಭತ್ಯೆ–ಸ್ಥಾನಮಾನಗಳು, ಅದೇ ಕಚೇರಿಯಲ್ಲಿ ಲೆಕ್ಕಿಗನಾಗಿ ಕೆಲಸ ಮಾಡುವವ ಅಷ್ಟೇ ತಾಸು ಕೆಲಸ ಮಾಡಿದರೂ ಒಲಿಯುವಂಥದ್ದೇನಲ್ಲ. ಈ ಹಣಕಾಸಿನ ದೃಷ್ಟಿಯನ್ನು ಬದಿಗಿರಿಸಿ ನೋಡಿದರೂ 'ಉದ್ದೇಶ ಪ್ರಾಪ್ತಿ'ಯ ನೆಲೆಯಿಂದಲೂ ಮುಖ್ಯಸ್ಥನಿಗೆ ಸಿಗುವ ತೃಪ್ತಿ ಸಾಮಾನ್ಯ ನೌಕರನದ್ದಾಗಿರುವುದಿಲ್ಲ. ಉದಾಹರಣೆಗೆ, ಜಾಗತಿಕ ಹಂತದಲ್ಲಿ ಐಟಿ ಕಂಪನಿಯೊಂದನ್ನು ಕಟ್ಟಿ ನಿಲ್ಲಿಸುವುದೆಂದರೆ ಅದರರ್ಥ ಭಾರತದ ಸೇವಾ ರಫ್ತಿನಲ್ಲಿ ಭಾಗಿಯಾಗಿ, ಭಾರತಕ್ಕೆ ಡಾಲರುಗಳ ಸಂಚಯವು ಹರಿದುಬರುವುದಕ್ಕೆ ಕಾರಣವಾದೆನೆಂಬ ತೃಪ್ತಿ. ಈ 'ದರ್ಶನ'ದಲ್ಲಿ ಕಂಪನಿಯ ಸ್ಥಾಪಕ ಹಾಗೂ ಆತನ ಅತಿಹತ್ತಿರದ ಕಾರ್ಯಕಾರಿ ತಂಡ ಭಾಗಿಯಾಗಿರುತ್ತದೆಯೇ ಹೊರತು ಎಲ್ಲರೂ ಅಲ್ಲ. ಹೀಗಾಗಿ, ಸಾಮಾನ್ಯ ನೌಕರನಾದವನಿಗೆ ವಾರಕ್ಕೆ ಎಪ್ಪತ್ತು ತಾಸು ಕೆಲಸ ಮಾಡುವುದರಿಂದ ನನಗೇನು ದಕ್ಕುತ್ತದೆ ಎಂಬ ವ್ಯಾವಹಾರಿಕ ಪ್ರಶ್ನೆ ಬಂದರೆ ಅದನ್ನು ಕೇವಲವಾಗಿ ಕಾಣಬೇಕಿಲ್ಲ. ದೇಶದ ಆರ್ಥಿಕ ಪ್ರಗತಿಯಲ್ಲಿ ನಿನ್ನದೊಂದು ಅಳಿಲು ಸೇವೆ ಎಂದುಕೊ ಎಂದೆಲ್ಲ ಉಪದೇಶ ಹೇಳುವುದಕ್ಕೆ ಸಾಧ್ಯವಾಗದ ಕಂದರವೊಂದು ಮಾರುಕಟ್ಟೆ ವ್ಯವಸ್ಥೆಯಲ್ಲಿದೆ.

ಉದಾಹರಣೆಗೆ, ಎಲ್ ಆ?ಯಂಡ್ ಟಿ ಚೇರ್ಮನ್ ಎಸ್ ಎನ್ ಸುಬ್ರಮಣ್ಯನ್ ಅವರ ಉದಾಹರಣೆಯನ್ನೇ ಗಮನಿಸೋಣ. ಅವರು ಭಾನುವಾರ ಮನೆಯಲ್ಲಿ ಹೆಂಡತಿ ಮುಖವನ್ನು ದಿಟ್ಟಿಸದೇ ಕಚೇರಿಗೆ ಬಂದು ಕೆಲಸ ಮಾಡಿದ್ದಕ್ಕೆ ಅವರಿಗೆ ಸಿಕ್ಕಿರುವ 'ಖೋತಾಭರ್ತಿ' ಯಾವ ಮಟ್ಟದ್ದು 2024ರ ವಿತ್ತೀಯ ವರ್ಷದಲ್ಲಿ ಸುಬ್ರಮಣ್ಯನ್ ಅವರು ಕಂಪನಿಯಿಂದ ಗಳಿಸಿರುವ ವಾರ್ಷಿಕ ಆದಾಯ 51 ಕೋಟಿ ರುಪಾಯಿಗಳು. ಇದರಲ್ಲಿ 3.6 ಕೋಟಿ ರುಪಾಯಿಗಳ ಮೂಲ ಸಂಬಳ, 1.67 ಕೋಟಿ ರುಪಾಯಿಗಳ ವಿಶೇಷ ಶಹಭಾಸ್ ಗಿರಿಯ ವೇತನ, 35.28 ಕೋಟಿ ರುಪಾಯಿಗಳ ಕಮಿಷನ್ ಇತ್ಯಾದಿಗಳೆಲ್ಲ ಸೇರಿವೆ. ಇದಕ್ಕೆ ಪ್ರತಿಯಾಗಿ ಆ ಕಂಪನಿಯಲ್ಲಿ ಕೆಲಸ ಮಾಡುವ ನೌಕರರ ಸರಾಸರಿ ಸಂಬಳವು ವಾರ್ಷಿಕ 9.77 ಲಕ್ಷ ರುಪಾಯಿಗಳು.

ಎಲ್ ಆಯಂಡ್ ಟಿ ಚೇರ್ಮನ್ ಅಥವಾ ಅಂಥ ಹುದ್ದೆಯಲ್ಲಿ ಇರುವವರು ಯಾರೇ ಆಗಿದ್ದರೂ ಸಾರ್ವಜನಿಕ ಸಾರಿಗೆಯ ದಟ್ಟಣೆಯಲ್ಲಿ ಜಾಗ ಮಾಡಿಕೊಂಡು ಪ್ರಯಾಣಿಸುವುದನ್ನೋ, ಅಥವಾ ಸಂಚಾರದ ಉದ್ವಿಗ್ನತೆ ಹೊದ್ದುಕೊಂಡಿರುವಂಥ ನಗರದ ರಸ್ತೆಗಳಲ್ಲಿ ತಾವೇ ವಾಹನವನ್ನು ಚಲಾಯಿಸಿಕೊಂಡು ಕಚೇರಿಗೆ ಬರುವುದನ್ನೋ ಮಾಡಬೇಕಿಲ್ಲ. ತನ್ನನ್ನು ಕಚೇರಿಗೆ ತಲುಪಿಸುವುದಕ್ಕೆ, ತನ್ನ ಮಕ್ಕಳನ್ನು ಶಾಲೆಗೆ ತಲುಪಿಸುವುದಕ್ಕೆ, ಹೆಂಡತಿಯನ್ನು ಖರೀದಿ ಸಂತೆಗಳಿಗೆ ಕಳುಹಿಸುವುದಕ್ಕೆ ಈ ಎಲ್ಲ ಆಯಾಮಗಳಲ್ಲೂ ವ್ಯವಸ್ಥೆ ಹೊಂದಿರುವವರು ಅವರು. ಆದರೆ ಸಾಮಾನ್ಯ ಉದ್ಯೋಗಿಗೆ ಇವೆಲ್ಲವೂ 'ಕೆಲಸ'ದೊಂದಿಗೇ ಜೋಡಿಸಿಕೊಂಡಿರುತ್ತವೆ. ವಿದೇಶದ ಬಿಸಿನೆಸ್ ಟ್ರಿಪ್ಪಿಗೆ ಹೋದಾಗ ಜತೆಗೆ ಹೆಂಡತಿಯನ್ನೂ ಕರೆದುಕೊಂಡುಹೋದರೆ ಅಲ್ಲಿಗೆ ಅಂಥವರ ಫ್ಯಾಮಿಲಿ ಟೈಮ್ ಸಂಪನ್ನವಾಗಿಬಿಡುತ್ತದೆ. ಸಾಮಾನ್ಯ ನೌಕರನಿಗೆ ಹಾಗಲ್ಲವಾದ್ದರಿಂದ ಆತ ಅಥವಾ ಆಕೆ 'ವರ್ಕ್ ಲೈಫ್ ಬ್ಯಾಲೆನ್ಸ್' ಬಗ್ಗೆ ಮಾತನಾಡುವುದರಲ್ಲಿ ದೋಷವೇನಿಲ್ಲ.

**ಹಾಗಾದರೆ ಮಹತ್ತ್ವಾಕಾಂಕ್ಷೆಗಳಿಗೇನರ್ಥ?**

ನೋಡಿ? ಎಲ್ಲ ಸ್ಥಾಪಕರೂ ಪ್ರಾರಂಭದಲ್ಲೇ ಕೋಟಿ–ಕೋಟಿ ರುಪಾಯಿಗಳನ್ನು ದುಡಿದಿಲ್ಲ. ಇವತ್ತಿಗೂ ನವೋದ್ದಿಮೆಗಳ ಸ್ಥಾಪಕರು ಅಂಥ ರಿಸ್ಕ್ ತೆಗೆದುಕೊಂಡೇ ಕೆಲಸ ಮಾಡುತ್ತಾರೆ. ಈ ಹಂತದಲ್ಲಿ ತಾಸುಗಳ ಲೆಕ್ಕ ಇಡದೇ ದುಡಿಯುವ ಅಪೇಕ್ಷೆಯನ್ನು ಹೊಂದುವುದು ಸಹಜವಲ್ಲವೇ ಎಂಬ ವಾದಗಳು ಬರುತ್ತವೆ.

ಫೈನ್. ಈ ಹಂತದಲ್ಲಿ ಎರಡು ಪ್ರಶ್ನೆಗಳನ್ನಿಡಬೇಕಾಗುತ್ತದೆ. ಒಂದು ವ್ಯಾವಹಾರಿಕ ಹಾಗೂ ಇನ್ನೊಂದು ತಾತ್ತ್ವಿಕ. ಒಂದೊಮ್ಮೆ ನವೋದ್ದಿಮೆ ಯಶಸ್ಸಾದರೆ ನಿಮ್ಮೊಂದಿಗೆ ವಾರದಲ್ಲಿ 70–80 ತಾಸು ದುಡಿದ ಉದ್ಯೋಗಿಗೆ ನೀವು ಕೊಡಲು ಬದ್ಧರಾಗಿರುವ ಪಾಲು ಏನು? ಇದಕ್ಕೆ ಉತ್ತರಿಸುವುದಕ್ಕೆ ಹಿಂದೇಟು ಹಾಕುವ ಸ್ಥಾಪಕನಿಗೆ, ದೇಶದ ಆರ್ಥಿಕತೆಗಾಗಿ ದುಡಿಯಿರಿ ಎಂದೆಲ್ಲ ಉಪದೇಶ ಹೇಳುವ ಅರ್ಹತೆ ಬರುವುದಿಲ್ಲ. ಎರಡನೆಯ ತಾತ್ತ್ವಿಕ ಆಯಾಮ ಎಂದರೆ– ಯಾವ ಉದ್ದೇಶ ಪ್ರಾಪ್ತಿಗಾಗಿ ನೀನು ನಿನ್ನ ನೌಕರನನ್ನು ವಾರಕ್ಕೆ 60–70 ತಾಸು ದುಡಿಯುವುದಕ್ಕೆ ಹೇಳುತ್ತಿದ್ದೀಯಾ? ಈಗಾಗಲೇ ನೂರು ಇಕಾಮರ್ಸ್ ಸಂಸ್ಥೆಗಳು ಥರಹೇವಾರಿ ವಸ್ತುಗಳನ್ನು ಬಿಕರಿಯಾಗಿಸುತ್ತಿವೆ, ಹೀಗಿರುವಾಗ ಇನ್ನೊಂದು 'ಡಿಫರೆಂಟ್' ಆಗಿ ತರುತ್ತೇನೆ ಎನ್ನುವುದು ಕನಸೇ? ವಿದೇಶದ ಯಾವುದೋ ಸಂಸ್ಥೆ–ಬ್ಯಾಂಕಿನ ವಹಿವಾಟಿಗೆ ಮಾಹಿತಿ ತಂತ್ರಜ್ಞಾನ ಪೂರೈಸಿಕೊಂಡುವುದಕ್ಕೆ ಹಲವು ಸಂಸ್ಥೆಗಳು ಪೈಪೋಟಿಯಲ್ಲಿವೆ, ಇದೇ ರೀತಿ ನಾನೂ ನನ್ನದೊಂದನ್ನು ತರುತ್ತೇನೆ ಎಂಬು ಕನಸೇ? ಹದಿನೈದಿಪ್ಪತ್ತು ಸುದ್ದಿವಾಹಿನಿಗಳು ಅವವೇ ರಾಜಕಾರಣಿಗಳು, ನಟರು, ಆಟಗಾರರ ಹಿಂದೆ ಒಂದು ಬಿಸಿನೆಸ್ ಮಾಡೆಲ್ ಕಂಡುಕೊಂಡಿರುವಾಗ ನಾನು 'ಡಿಫರೆಂಟ್' ಆಗಿ ಇನ್ನೊಂದು ತರುತ್ತೇನೆ, ಬನ್ನಿ ವಾರಕ್ಕೆ ಎಪ್ಪತ್ತು ತಾಸು ಕೆಲಸ ಮಾಡೋಣ ಎನ್ನೋಣವೇ?

ಇಂಥ ಎಲ್ಲವಕ್ಕೂ ಎಲ್ಲರೂ ಸ್ವತಂತ್ರರು, ಮತ್ತಿವುಗಳಲ್ಲಿ ಕೆಲವು ವ್ಯಾವಹಾರಿಕವಾಗಿ ಯಶಸ್ವಿಯೂ ಆಗಬಹುದು. ಆದರೆ ಇವ್ಯಾವವೂ ವ್ಯಕ್ತಿಯೊಬ್ಬನ ವಾರದ 60–70 ತಾಸನ್ನು ಹೀರಿಕೊಂಡಿದ್ದಕ್ಕೆ ಪ್ರತಿಯಾಗಿ ಮಹಾಮೌಲ್ಯವೊಂದನ್ನೇನೂ ಸೃಷ್ಟಿಸುವಂಥವುಗಳಲ್ಲ. ಇಂಥವೆಲ್ಲ ದೇಶದ ಆರ್ಥಿಕ ಪ್ರಗತಿಯ ಒಂದು ಹಂತದಲ್ಲಿ ಮಹತ್ತ್ವಾಕಾಂಕ್ಷೆಗಳೇ ಆಗಿದ್ದವು ಮತ್ತು ಆ ಕಾಲಘಟ್ಟದಲ್ಲಿ ಉದ್ಯೋಗಿಯೊಬ್ಬನಿಗೆ ಈ ಉದ್ದೇಶಪೂರ್ತಿಗಾಗಿ ಸಮಯ ನೋಡದೇ ಕೆಲಸ ಮಾಡುವುದರಲ್ಲಿ ಸಂತೃಪ್ತಿ ಇತ್ತು. ಈಗ ಇರಬೇಕಿಲ್ಲ.

ಈಗ ಮಹತ್ತ್ವಾಕಾಂಕ್ಷೆ ಎಂದರೆ– ಸ್ಕೈರೂಟ್ ಏರೋಸ್ಪೇಸ್, ಧ್ರುವ್ ಸ್ಪೇಸ್ ಥರದ ನವೋದ್ದಿಮೆಗಳ ಮೂಲಕ ಬಾಹ್ಯಾಕಾಶ ವಿಭಾಗದಲ್ಲಿ ಕೆಲಸ ಮಾಡಲು ಇಚ್ಚಿಸುವ ಭಾರತೀಯ ಪ್ರತಿಭೆಗಳಿಗೆ ಅವಕಾಶ ತೆರೆದಿಡುವುದು, ಏಜ್ ಆಫ್ ಎಂಪೈರ್ ಥರದ ವಿಡಿಯೊ ಗೇಮ್ ಅನ್ನು ನಮ್ಮ ಮಹಾಭಾರತದ ಅವತರಣಿಕೆಯಲ್ಲಿ ಸೃಷ್ಟಿಸಿ ಜಗತ್ತಿಗೇ ಹುಚ್ಚುಹಿಡಿಸೋಣ ಬನ್ನಿ ಎಂದು ಕನಸು ಕಾಣುವುದು, ಇಲ್ಲವೇ ಭಾರತೀಯ ವೇದ–ಪುರಾಣ–ಇತಿಹಾಸಗಳ ಬಗ್ಗೆ ಮೂಲ ಆಕರಗಳನ್ನು ಆಧರಿಸಿ ಉತ್ತರಿಸುವ, ಕ್ರಿಯಾತ್ಮಕ ಕತೆಗಳನ್ನು ಕಟ್ಟಿಕೊಡುವ, ದೇಸೀ ಸೊಗಡಿನಲ್ಲಿ ಅವಕ್ಕೆ ಸಂಬಂಧಿಸಿದ ಚಿತ್ರಗಳನ್ನು ಸೃಜಿಸುವ ಎಐ ಮಾದರಿಯೊಂದನ್ನು ಅಭಿವೃದ್ಧಿಪಡಿಸೋಣ ಬನ್ನಿ ಎನ್ನುವುದು?. ಹೀಗೆಲ್ಲ ವಿಷನ್ ತೆರೆದಿಟ್ಟಾಗ ಅದು ಮಹತ್ತ್ವಾಕಾಂಕ್ಷೆ ಆಗುತ್ತದೆ. ಮತ್ತಿದಕ್ಕೆ ಕೆಲಸ ಮಾಡಲು ಬರುವ ಉದ್ಯೋಗಿಗಳು ಎಷ್ಟು ತಾಸು ಕೆಲಸ ಮಾಡಬೇಕು ಎಂಬ ಪ್ರಶ್ನೆಯನ್ನು ಕೇಳುವುದೇ ಇಲ್ಲ. ಏಕೆಂದರೆ ಅಂಥವರನ್ನೇ ಇಂಥ ಕಾರ್ಯಗಳು ಸೆಳೆಯುತ್ತವೆ.

ಇಂಥ ಯಾವ ದೃಷ್ಟಿಗಳೂ ಇರದೇ ತಮ್ಮ ಕಂಪನಿಯ ವ್ಯಾಲ್ಯುವೇಷನ್ ಸಂಖ್ಯೆಯನ್ನು ಮಾತ್ರವೇ ಮುಂದಿಟ್ಟು, ಇಲ್ಲವೇ ಡಾಲರ್ ಅನ್ನು ರುಪಾಯಿಯಾಗಿ ಪರಿವರ್ತಿಸಿದಾಗ ಹೆಚ್ಚಾಗುವ ಲಾಭವನ್ನೇ ತೋರಿಸಿಕೊಂಡು ಮಹತ್ತ್ವಾಕಾಂಕ್ಷೆ ಹಾಗೂ ದೇಶ ಹಿತದ ಕತೆ ಹೇಳುವವರನ್ನೆಲ್ಲ ವಿಪರೀತವಾಗಿ ಆರಾಧಿಸಬೇಕಿಲ್ಲ.

**ಸಾಮಾನ್ಯ ನೌಕರನಾಗಿ ನಾನು ಹೇಗೆ ಯೋಚಿಸಲಿ?**

ಪ್ರಾಯೋಗಿಕವಾಗಿ ನೋಡುವುದಾದರೆ, ಒಂದು ಹಂತದವರೆಗೆ ಉದ್ಯೋಗಕ್ಕಾಗಿ ಉದ್ಯೋಗ ಮಾಡಬೇಕಾಗುತ್ತದೆ. ಅಲ್ಲಿ ಒಂದಿಷ್ಟು ದುಡಿಮೆ ಹಾಗೂ ಅದರಿಂದ ಮೂಲಭೂತ ಅವಶ್ಯಗಳು ಸುಧಾರಿಸುತ್ತವೆ. ಒಳ್ಳೆಯದ್ದೋ, ಕೆಟ್ಟದ್ದೋ ಒಟ್ಟಿನಲ್ಲಿ ಒಂದಿಷ್ಟು ಅನುಭವಗಳಾಗುತ್ತವೆ. ಆರ್ಥಿಕವಾಗಿ ಹುಟ್ಟುತ್ತಲೇ ಅದೃಷ್ಟವಂತರಲ್ಲದವರು ಇಷ್ಟು ಮಾಡುವುದು ಅನಿವಾರ್ಯ. ಇಷ್ಟಕ್ಕೂ ಸುಮಾರು 30 ವರ್ಷ ಪ್ರಾಯದವರೆಗೆ ವರ್ಕ್–ಲೈಫ್ ಬ್ಯಾಲೆನ್ಸ್ ಎಂಬುದೆಲ್ಲ ಹೆಚ್ಚಿನವರಿಗೆ ವ್ಯತ್ಯಾಸವಾಗುವುದಿಲ್ಲ.

ನಂತರದಲ್ಲಿ ಎರಡು ಮಾರ್ಗಗಳು ಗೋಚರಿಸುತ್ತವೆ. ಒಂದೋ, ಜೀವನಶೈಲಿ ಸರಳವಾಗಿರಿಸಿಕೊಂಡು ಸಣ್ಣಪಟ್ಟಣಗಳಲ್ಲಿ ಬದುಕು ಕಂಡುಕೊಳ್ಳುವುದು. ಆಗ ಅತಿ ದುಬಾರಿ ರಿಯಲ್ ಎಸ್ಟೇಟ್, ದುಬಾರಿ ಶಾಲೆ, ದುಬಾರಿ ಸಾಮಾಜಿಕ ಪ್ರಸ್ಟೀಜುಗಳೆಲ್ಲ ತಗ್ಗುತ್ತಾವಾದ್ದರಿಂದ ಕಡಿಮೆ ದುಡಿದರೂ ಬದುಕಿನಲ್ಲಿ ಗುಣಮಟ್ಟ ಇಟ್ಟುಕೊಳ್ಳಬಹುದು. ಆಗ ವಾರಕ್ಕೆ 60–70 ತಾಸು ದುಡಿಮೆಯೆಂಬ ಚರ್ಚೆಯಿಂದ ಹೊರಬೀಳಬಹುದು.

ಇನ್ನೊಂದು, ಈ ಮಹತ್ತ್ವಾಕಾಂಕ್ಷೆ ವರ್ತುಲದಲ್ಲೇ ಇದ್ದುಕೊಂಡು, ಆ ಉನ್ನತ ಗುರಿಯನ್ನು ಕೇವಲ ಸಂಬಳಕ್ಕಲ್ಲದೇ ಮೇಲೆ ವಿವರಿಸಿದ ಉದ್ದೇಶತೃಪ್ತಿಗೆ ನಂಟು ಹಾಕಿಕೊಳ್ಳುವುದು. ಅಂಥ ಕಂಪನಿಗಳು, ಅಂಥ ಜನರ ನಡುವಿನಲ್ಲೇ ಉದ್ಯೋಗ ಅರಸಿಕೊಳ್ಳುವುದು. ಹಾಗೆ ನಾವು ಮಾಡುತ್ತಿರುವ ಕೆಲಸವು ಸಂಬಳದ ಜತೆ–ಜತೆಯಲ್ಲಿ ವಿಷನ್ ಅಥವಾ ದರ್ಶನದ ಭಾಗವಾಗಿದ್ದಾಗ, ಮತ್ತದರ ಭಾವವನ್ನೂ ನೀವೂ ಹಂಚಿಕೊಳ್ಳುತ್ತಿದ್ದಾಗ, ಭಾನುವಾರ ಕೆಲಸ ಬಂದರೂ, ಕೆಲವು ಸೀಸನ್ನುಗಳಲ್ಲಿ ವಾರಕ್ಕೆ 70 ತಾಸು ಕೆಲಸವಾದರೂ ಅದು ಹೊರೆ ಎನ್ನಿಸುವುದಿಲ್ಲ.

**–ಕೃಪೆ : ಕ.ಪ್ರ.– ಚೈತನ್ಯ ಹೆಗಡೆ**

# ಪೊಲೀಸ್ ಠಾಣೆಯಲ್ಲಿ ಬ್ಯಾಂಕ್ ಅಧಿಕಾರಿಗಳ ಜತೆ ಸಭೆ ಸಂಶಾಸ್ಪದ ವ್ಯಕ್ತಿಗಳ ಮೇಲೆ ನಿಗಾ ಇಡಿ–ಸಿಪಿಐ



**ತೇರದಾಳ :** ಬ್ಯಾಂಕಿನಲ್ಲಿ ವ್ಯವಹಾರ ಇರದಿದ್ದರು ಕೆಲವರು ಬ್ಯಾಂಕಗಳ ಸುತ್ತಮುತ್ತ ಅಲೆದಾಡುವುದು ಬ್ಯಾಂಕಿಗೆ ಬರುವವರನ್ನು ಹೋಗುವವರನ್ನು ನೋಡುವ ಮೂಲಕ ಸಂಶಾಸ್ಪದವಾಗಿ ಅಲೆದಾಡುತ್ತಾರೆ. ಅಂತಹ ವ್ಯಕ್ತಿಗಳ ಮೇಲೆ ನಿಗಾ ವಹಿಸಿ. ಕಡ್ಡಾಯವಾಗಿ ಸಿಸಿಟಿವಿ ಸೆಕ್ಯೂರಿಟಿ ಗಾರ್ಡ್‌ಗಳನ್ನು ನೇಮಿಸಿಕೊಳ್ಳಿ ಎಂದು ಬನಹಟ್ಟಿ ಸಿಪಿಐ ಸಂಜೀವ ಬಳಗಾರ ಬ್ಯಾಂಕ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೀದರ, ಮಂಗಳೂರ ಹಾಗೂ ವಿಜಯಪುರಗಳಲ್ಲಿ ಬ್ಯಾಂಕಗಳಲ್ಲಿನ ಹಣ ದರೋಡೆ ನಡೆದ ಹಿನ್ನಲೆಯಲ್ಲಿ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಶನಿವಾರ ಬ್ಯಾಂಕ್ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು.

ಬ್ಯಾಂಕಿನಲ್ಲಿ ಹೆಚ್ಚಿಗೆ ಹಣ ಇಟ್ಟುಕೊಳ್ಳದೆ ನಿಮ್ಮ ನಿಯಮಾನುಸಾರ ಹಣ ಇಟ್ಟುಕೊಳ್ಳಿ. ಸಹಕಾರಿ, ಸೌಹಾರ್ದ ಹಾಗೂ ಸಂಘ ಸಂಸ್ಥೆಗಳಲ್ಲಿ ಸೆಕ್ಯೂರಿಟಿ ಗಾರ್ಡ್ ನೇಮಿಸಿಕೊಳ್ಳಲು ಅವಕಾಶ ಇಲ್ಲದಿದ್ದರೆ ಸಿಪಾಯಿಗೆ ತರಬೇತಿ ನೀಡಿ. ಹಾಗೂ ಖಾರದ ಪುಡಿ ಹಾಗೂ ಪಪ್ಪರ ಸ್ಪ್ರೆ ಇಟ್ಟುಕೊಂಡರೆ ಒಳ್ಳೆಯದು. ಸಿಸಿಟಿವಿಗಳು ಹೆಸರಿಗಷ್ಟೇ ಅಳವಡಿಸಬೇಡಿ. ಗುಣಮಟ್ಟದ ಹಾಗೂ ಬ್ಯಾಂಕಿಗೆ ಬರುವ ದಾರಿ ಕಾಣುವ ಹಾಗೆ ಅಳವಡಿಸಿ. ಡಿವಿಆರ್ ಡಕಾಯಿತರ ಕೈಗೆ ಸಿಗದ ಹಾಗೆ ಇಡಿ. ಸೆನ್ಸರ್ ಅಳವಡಿಸುವ ಕ್ರಮ ಕೈಗೊಳ್ಳಿ ಎಂದು ಹೇಳಿದ ಸಿಪಿಐ, ತಾವು ಕೂಡ ಪ್ರತಿಯೊಂದು ಬ್ಯಾಂಕಿಗೆ ಬೇಟಿ ನೀಡಿ ಕೈಗೊಂಡಿರುವ ಕ್ರಮಗಳ ಕುರಿತು ಪರಿಶೀಲನೆ ನಡೆಸತ್ತೇವೆ. ಬ್ಯಾಂಕಿನಲ್ಲಿ ಪೊಲೀಸ್ ಸಹಾಯವಾಣಿ ಸಂಖ್ಯೆ 112 ಫಲಕ ಅಳವಡಿಸಿ ಎಂದು ಸಲಹೆ ನೀಡಿದರು. ಪಿಎಸ್‌ಐ ಅಪ್ಪಣ್ಣ ಐಗಳಿ ಎಟಿಂಗಳ ಕುರಿತು ಹಾಗೂ ಬ್ಯಾಂಕಿಗೆ ಬರುವ ಗ್ರಾಹಕರ ಕುರಿತು ಹಲವು ಸಲಹೆಗಳನ್ನು ನೀಡಿದರು. ಎಸ್‌ಬಿಐ, ಐಸಿಐಸಿಐ, ಪ್ರಭುಲಿಂಗೇಶ್ವರ ಸೇರಿದಂತೆ ವಿವಿಧ ಬ್ಯಾಂಕಿನ ಅಧಿಕಾರಿಗಳು ಸಲಹೆಗಳನ್ನು ಹಾಗೂ ಮಾಹಿತಿಗಳನ್ನು ಪಡೆದುಕೊಂಡರು. ವಿವೇಕ ಸುವರ್ಣಖಂಡಿ, ಸಾಗರ ಇದ್ದರು.



**ರಬಕವಿ : ಇಲ್ಲಿನ ಎಂ. ವಿ. ಪಟ್ಟಣ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ನಡೆದ ಜವಾಹರ ನವೋದಯ ವಿದ್ಯಾಲಯ ಆರನೇ ತರಗತಿ ಪ್ರವೇಶ ಪರೀಕ್ಷೆ ಪರಿಶೀಲನೆಗೆ ತಾಲ್ಲೂಕು ತಹಶೀಲ್ದಾರ್ ಗಿರೀಶ ಸ್ವಾದಿಯವರು ಭೇಟಿ ನೀಡಿದರು. ಪರೀಕ್ಷೆಯ ಅಧಿಕಾರಿಗಳಾದ ಸಿ.ಎಲ್.ಓ ಬಸವರಾಜ ಕುದುರಿಮನಿ ಮುಖ್ಯೋಪಾಧ್ಯಾಯರು ಸರ್ಕಾರಿ ಪ್ರೌಢಶಾಲೆ ಗೋಲಭಾವಿ ಹಾಗೂ ಪರೀಕ್ಷೆಯ ಮುಖ್ಯ ಅಧೀಕ್ಷಕರಾದ ಬಿ. ಎಸ್. ಪಾಟೀಲ್ ಉಪಸ್ಥಿತರಿದ್ದರು.**

# ಸ್ಯಾಂಡಲ್‌ವುಡ್ ನಟಿ "ಆರಾಧನಾ ಅವರಿಂದ ಮೂರು ದಿನಗಳ ದ ಜ್ಯುವೆಲರಿ ಷೋ ಚಾಲನೆ

## ದೇಶದ 40 ಹೆಸರಾಂತ ಆಭರಣ ತಯಾರಕರು ಭಾಗಿ | ಹೊಸ ಆಭರಣಗಳ ಖರೀದಿ ಹಾಗೂ ಹಳೆ ಚಿನ್ನವನ್ನು ಬದಲಾಯಿಸಿಕೊಳ್ಳುವ ಅವಕಾಶ

**ಬೆಂಗಳೂರು :** ದೇಶದ 40 ಹೆಸರಾಂತ ಆಭರಣ ತಯಾರಕರು ಭಾಗವಹಿಸಿರುವ ಪ್ರತಿಷ್ಠಿತ "ದ ಜ್ಯುವೆಲರಿ ಷೋ" ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಜನಪ್ರಿಯ ಸ್ಯಾಂಡಲ್‌ವುಡ್ ನಟಿಯಾದ "ಆರಾಧನಾ" ಅವರು ಇಂದು ಚಾಲನೆ ನೀಡಿದರು.



ಪ್ರದರ್ಶನ ಹಾಗೂ ಮಾರಾಟ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆಭರಣ ಎಂದರೆ ಮಹಿಳೆಯರಿಗೆ ಅಚ್ಚುಮೆಚ್ಚು ಹಾಗೂ ಅತ್ಯುತ್ತಮ ಹೂಡಿಕೆಯೂ ಇದಾಗಿದೆ. ದೇಶದ ವಿವಿಧ ಭಾಗಗಳಿಂದ ಆಗಮಿಸಿರುವ ಹೆಸರಾಂತ ಆಭರಣ ತಯಾರಕರು ತಮ್ಮ ಅಮೋಘ ಕಲೆಯಿಂದ ತಯಾರಿಸಿರುವ ಉತ್ಪನ್ನಗಳನ್ನು ಪ್ರದರ್ಶಿಸುತ್ತಿದ್ದಾರೆ. ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ನಾಗರೀಕರಿಗೆ ಆಭರಣಗಳನ್ನು ನೋಡಲು ಮತ್ತು ಕೊಳ್ಳಲು ಈ ಮೇಳದಲ್ಲಿ ಅವಕಾಶವಿದೆ. ಭಾರತ ದೇಶದ ವಿವಿಧ ಕುಶಲಕರ್ಮಿಗಳು ತಯಾರಿಸಿದಂತಹ ವಿಭಿನ್ನ ಶೈಲಿಯ ಆಭರಣಗಳು ಈ ಮೇಳದಲ್ಲಿ ಲಭ್ಯವಿದ್ದು ಸಾರ್ವಜನಿಕರು ಈ ಅವಕಾಶವದ ಸದುಪಯೋಗ ಪಡಿಸಿಕೊಳ್ಳುವಂತೆ ಕರೆ ನೀಡಿದರು.

ಮೇಳದ ಆಯೋಜಕರಾದ ಗೋಲ್ಡನ್ ಕ್ರೀಪರ್ ಸಂಸ್ಥೆಯ ಜಗದೀಶ್ ಬಿ.ಎನ್ ಮತ್ತು ಹೇಮಲತಾ ಜಗದೀಶ್ ಮಾತನಾಡಿ, ಜನವರಿ 17, 18 ಮತ್ತು 19 ರಂದು ನಗರದ ಶೆರಟನ್ ಗ್ರಾಂಡ್ ಹೋಟೇಲ್ ನಲ್ಲಿ ಈ ಅಮೋಘ ಭಾರತೀಯ ಒಡವೆಗಳ ಉತ್ಸವವನ್ನು ಆಯೋಜಿಸಲಾಗಿದೆ. ದೇಶದ ಹೆಸರಾಂತ ಆಭರಣ ಮಳಿಗೆಗಳು ಭಾಗವಹಿಸಿದ್ದು, ವಿಶೇಷ ವಿನ್ಯಾಸಗಳನ್ನೊಳಗೊಂಡ ಆಭರಣಗಳ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೇ ಕಲ್ಪಿಸಲಾಘಿದೆ. ಆಭರಣ ಮಳಿಗೆಳ ಸದಸ್ಯರು ಚಿನ್ನಾಭರಣ ಮತ್ತು ವಜ್ರಾಭರಣಗಳ ಬಗ್ಗೆ ಎಲ್ಲಾ ತರಹದ ಮಾಹಿತಿಯನ್ನು ಉಚಿತವಾಗಿ ನೀಡಲಿದ್ದಾರೆ. ಇಲ್ಲಿ ಖರೀದಿಸಲಾಗುವ ಆಭರಣಗಳಿಗೆ ಮೇಳದ ನಂತರವೂ ಸೇವೆಯನ್ನು ಒದಗಿಸಲಾಗುವುದು ಎಂದಿದ್ದಾರೆ.

ಬೆಂಗಳೂರಿನ ಅನನ್ಯ ಜ್ಯುವೆಲ್ಸ್, ಬಿ ಎನ್ ಆರ್, ದವನಂ, ಗಜರಾಜ್, ಕಳಸ, ಎಂ ಆರ್ ಕೆ ಜೀವಾರ್, ನೀಲಕಂಠ, ನಿಕಾರ್, ಪಿ ಎಂ ಜೆ, ಪ್ರಕಾಶ್ ಜ್ಯುವೆಲರ್ಸ್, ಸಿಂಹ ಜ್ಯುವೆಲರ್ಸ್, ಶ್ರೀ ಗಣೇಶ್ ಡೈಮೆಂಡ್ಸ್, ವರಶ್ರೀ, ನೈನ್ ಜ್ಯುವೆಲ್ಸ್, ರಾಜಿ ಜ್ಯುವೆಲರಿ, ರೋಹಿಣಿ ಡೈಮೆಂಡ್ಸ್, ಸಂಕೇಶ್ ಸುರಾನ, ಸಪ್ತೋಷಿ, ವಿನ್ಯಾಸ, ಟ್ರೈ ಡೈಯಾ, ವಂಡರ್ ಡೈಮೆಂಡ್ಸ್, ಮೈ ಸಿಲ್ವರ್, ರೂಪಂ ಸಿಲ್ವರ್, ಸಾಂಚೀಸ್, ಸ್ಟೈಲ್ ಔರಾ, ಮದನ್ ಜೆಮ್ಸ್, ದಗಿನಾ ಜ್ಯುವೆಲರ್ಸ್ (ಸೂರತ್), ಪನ್ನ ಜ್ಯುವೆಲರ್ಸ್ (ಹೈದರಾಬಾದ್), ಅರಹಮ್ (ಕೊಲ್ಕತ್ತ), ಔರಾ ಬೈ ಸುರಾನ, ಶ್ರೀ ಪಾರಾಮನಿ, ಶ್ರೀಹರಿ ಡೈಯಾಜೆಮ್ಸ್ (ನವದೆಹಲಿ), ಸುವರ್ಣರಾಜ್, ಸ್ಯಾಂಜಾನಿ (ಮುಂಬೈ), ಜೈನಾ ಜ್ಯುವೆಲ್ಸ್ (ಹರಿಯಾಣ), ಸುನೀಲ್ ಜ್ಯುವೆಲರ್ಸ್, ಮಂಗಳ್ ಜೆಮ್ಸ್ (ಜೈಪುರ್), ಸ್ರಸ್ಥ ನಿತ್ಯಾಸ್ (ವಿಶಾಕಪಟ್ಟಣಂ), ಬಾಲಾಜಿ ಪರ್ಲ್ಸ್ (ಚೆನ್ನೈ) ಆಭರಣ ಮಳಿಗೆಗಳು ಭಾಗವಹಿಸಿವೆ. ಗ್ರಾಹಕರು ತಮ್ಮ ಅಭಿರುಚಿ ಮತ್ತು ಬಜೆಟ್‌ಗನುಗುಣವಾಗಿ ಆಭರಣಗಳನ್ನು ಖರೀದಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಸ್ತೆ ಅಪಘಾತದಲ್ಲಿ ಮಕ್ಕಳ ಸಂಖ್ಯೆ ಹೆಚ್ಚಳ ಪಿಎಸ್‌ಐ ಶಾಂತಾ ಕಳವಳ

**ಚಿಮ್ಮಡ :** ಇತ್ತೀಚಿನ ದಿನಗಳಲ್ಲಿ ಮಕ್ಕಳು ರಸ್ತೆ ಅಪಘಾತಗಳಲ್ಲಿ ಗಾಯಗೊಳ್ಳುತ್ತಿರುವುದು ಹಾಗೂ ಸಾವಿಗೀಡಾಗುತ್ತಿರುವ ಪ್ರಕರಣಗಳು ಹೆಚ್ಚುತ್ತಿದ್ದು ಇದಕ್ಕೆ ಮಕ್ಕಳು ರಸ್ತೆ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿರುವುದುಪ್ರಮುಖಕಾರಣವಾಗಿದೆ ಎಂದು ಬನಹಟ್ಟಿ ಠಾಣಾಧಿಕಾರಿ ಶ್ರೀಮತಿ ಶಾಂತಾ ಹಳ್ಳಿ ಹೇಳಿದರು.



ಸಮೀಪದ ಯರಗಟ್ಟಿ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಬಾಗಲಕೋಟೆ ಜಿಲ್ಲಾ ಪೋಲಿಸ್ ಹಾಗೂ ಬನಹಟ್ಟಿ ಪೋಲಿಸ್ ಠಾಣೆಯ ಹಾಗೂ ಯರಗಟ್ಟಿ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಸಹಯೋಗದಲ್ಲಿ ಗುರುವಾರದಂದು ಹಮ್ಮಿಕೊಳ್ಳಲಾಗಿದ್ದರಾಷ್ಟ್ರೀಯರಸ್ತೆಸುರಕ್ಷತಾ ಸಪ್ತಾಹ,ಸೈಬರ್‌ಅಪರಾಧಹಾಗೂಪೋಕ್ಸೊ ಕುರಿತ ಅರಿವುಕಾರ್ಯಕ್ರಮದ ಉದ್ಘಾಟಣೆ ನೆರವೇರಿಸಿ ಮಾತನಾಡಿದ ಅವರು ಸಕ್ಕರೆ ಕಾರ್ಖಾನೆಗಳು ಪ್ರಾರಂಭವಿರುವುದರಿಂದ ರಸ್ತೆಯಲ್ಲಿ ಕಬ್ಬು ತುಂಬಿದ ಟ್ರ್ಯಾಕ್ಟರ್‌ಗಳ ಸಂಖ್ಯೆ ಗಣನೀಯವಾಗಿದ್ದು ಅಪಾಯದ ಮಟ್ಟದಲ್ಲಿ ಸಾಗುತ್ತಿರುವುದರಿಂದ ಮಕ್ಕಳು ಹಾಗೂ ಸಾರ್ವಜನಿಕರು ಎಚ್ಚರಿಕೆಯಿಂದ ಚಲಿಸಬೇಕು, ಎಲ್ಲರೂ ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸಿ ಸುರಕ್ಷತೆಯಿಂದ ಮನೆಗೆ ಮರಳಬೇಕೆಂದು ತಿಳಿಸಿದ ಅವರು ದ್ವಿಚಕ್ರ ವಾಹನ ಸವಾರರು ವಾಹನ ಚಲಾಯಿಸುವಾಗ ಹೆಲ್ಮೆಟ್‌ಧರಿಸುವುದು, ಚಾಲನಾ ಪರವಾಣಿಗೆ ಹಾಗೂ ಇತರ ಅವಶ್ಯಕ ದಾಖಲೆಗಳನ್ನು ತಮ್ಮೊಂದಿಗೆ ಒಯ್ಯುವುದು ಕಡ್ಡಾಯವಾಗಿದೆ ಇದನ್ನು ಪಾಲಿಸಬೇಕೆಂದರು.

ಪ್ರೌಢ ಶಾಲೆಯ ಸಹ ಶಿಕ್ಷಕರಾದ ಶ್ರೀ ಉತ್ತಮಕುಮಾರ ಮಗದುಮ್ ಪ್ರಾಸ್ತಾವಿಕವಾಗಿ ಮಾತನಾಡಿ ಈ ವರ್ಷದ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣ ಪಡೆಯುವುದರ ಮೂಲಕ ಒಳ್ಳೆಯ ನಾಗರೀಕರಾಗಿ ಶಾಲೆಯ ಹಾಗೂ ಗ್ರಾಮದ ಕೀರ್ತಿಯನ್ನು ಹೆಚ್ಚಿಸಬೇಕು, ಧ್ವನಿವರ್ಧಕ ನಿಷೇಧ ಫಲಕಗಳ ಅಳವಡಿಕೆಯಿಂದಾಗಿ ಶಬ್ದ ಮಾಲಿನ್ಯ ತೀರಾ ಕಡಿಮೆ ಯಾಗಿದೆ, ಈ ಸಲವೂ ಎಸ್.ಎಸ್. ಎಲ್.ಸಿ. ಫಲಿತಾಂಶ ಗುಣಾತ್ಮಕವಾಗಿ ಹಾಗೂ ಧನಾತ್ಮಕವಾಗಿ ಬರಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೌಢ ಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯರಾದ ಶ್ರೀ ಐ.ಡಿ. ನದಾಫ್ ವಹಿಸಿದ್ದರು, ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯರಾದ ಶ್ರೀಮತಿ ಎಮ್.ಐ. ಚಿತ್ರಭಾನುಕೋಟಿ, ಎಸ್.ಡಿ. ಎಮ್.ಸಿ. ಅಧ್ಯಕ್ಷರಾದ ಶ್ರೀ ಮಹಾದೇವ ಸನದಿ, ಬಸಪ್ಪಕಂಕಣವಾಡಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ಎಸ್.ಹೆಚ್. ರಾಮದುರ್ಗ ಕಾರ್ಯಕ್ರಮ ಸ್ವಾಗತಿಸಿ ನಿರೂಪಿಸಿದರು, ಶ್ರೀಮತಿ ಆರ್.ವಿ.ಬಾಣ–ಕಾರ ವಂದಿಸಿದರು.

ಶಿಕ್ಷಕರು, ಪಾಲಕರು, ಗ್ರಾಮಸ್ಥರು, ಗ್ರಾಮ ಪಂಚಾಯತ ಸದಸ್ಯರು, ಎಸ್.ಡಿ.ಎಮ್.ಸಿ. ಪದಾಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

# ಮುಧೋಳ ನಗರದ ಎಪಿಎಂಸಿಯಲ್ಲಿ ಕಾಯಿ ಪಲ್ಲೆ ಮಾರುಕಟ್ಟೆ ಆರಂಭಿಸಲು ಆಗ್ರಹ



**ಮುಧೋಳ :** ನಗರದ ಎಪಿಎಂಸಿ ಪ್ರಾಂಗಣದಲ್ಲಿ ಕಾಯಿಪಲ್ಲೆ ಮಾರುಕಟ್ಟೆ ಪ್ರಾರಂಭಿಸಲು ಸಾರ್ವಜನಿಕರು ಅನೇಕ ವರ್ಷಗಳಿಂದ ಒತ್ತಾಯಮಾಡುತ್ತ ಬಂದಿದ್ದಾರೆ ಆ ಬೇಡಿಕೆ ಇನ್ನು ವರೆಗೂ ಈಡೇರಿಸಲು ಸಾಧ್ಯ ವಾಗುತ್ತಿಲ್ಲ ಇದರಿಂದ ನೂತನ ಎಪಿಎಂಸಿ ಅಧ್ಯಕ್ಷ ಉಪಾಧ್ಯಕ್ಷರು ಸರ್ವ ನಿರ್ದೇಶಕ ಮಂಡಳಿಯ ಪದಾಧಿಕಾರಿಗಳು ಆದಷ್ಟು ಬೇಗ ಕಾಯಿಪಲ್ಲೆ ಮಾರುಕಟ್ಟೆ ಪ್ರಾರಂಭಿಸಬೇಕು ಎಂದು ನಗರಸಭೆ ಮಾಜಿ ಸದಸ್ಯ ಬಸವರಾಜ ಮಾನೆ, ಆಗ್ರಹಿಸಿದರು, ಅವರು ಇತ್ತಿಚೆಗೆ ನಗರದ ಎಪಿಎಂಸಿಗೆ ನೇಮಕಗೊಂಡ ನೂತನ ಅಧ್ಯಕ್ಷ ಉಪಾಧ್ಯಕ್ಷ ಹಾಗೂ ನಿರ್ದೇಶಕ ಮಂಡಳಿ ಪದಾಧಿಕಾರಿಗಳಿಗೆ ಮುಧೋಳ ನಗರದ ಆತ್ಮೀಯ ಗೆಳೆಯರ ಬಳಗದಿಂದ ಸನ್ಮಾನಿಸಿ ಮಾತನಾಡಿದರು, ಸನ್ಮಾನ ಸ್ವೀಕರಿಸಿ ಅಧ್ಯಕ್ಷ ಸಂಗಪ್ಪ ಇಮ್ಮನ್ನವರ ಮಾತನಾಡಿ, ಅವರು ಹೇಳಿದ್ದು ಸರಿಯಾಗಿದೆ ಸಚಿವ ಆರ್ ಬಿ ತಿಮ್ಮಾಪುರ ರವರು ಕೋಡ ಈಗಾಗಲೇ ನಗರದ ನಾಲ್ಕು ಕಡೆ ಕಾಯಿಪಲ್ಲೆ ಮಾರುಕಟ್ಟೆ ಪ್ರಾರಂಭಿಸುವುದಾಗಿ ಹೇಳಿದ್ದಾರೆ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ನಾವು ಕೂಡ ಎಪಿಎಂಸಿಯಲ್ಲಿ ಕಾಯಿಪಲ್ಲೆ ಮಾರುಕಟ್ಟೆಯನ್ನು ಪ್ರಾರಂಭಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದರು,

ನಗರದ ಎಪಿಎಂಸಿ ಪ್ರಾಂಗಣದಲ್ಲಿ ಕಾಯಿಪಲ್ಲೆ ಮಾರುಕಟ್ಟೆ ಪ್ರಾರಂಭಿಸುವುದ ರಿಂದ ನಗರದ ಗಡದನ್ನವರ ವೃತ್ತ ದಿಂದ ಈ ಭಾಗದ ಅನೇಕ ಕಾಲೂನಿ ಗಳಲ್ಲಿ ವಾಸಿಸುವ ಜನರಿಗೆ ತುಂಬಾ ಅನುಕೂಲ ಆಗುತ್ತದೆ ಎಂದು ಆತ್ಮೀಯ ಗೆಳೆಯರ ಬಳಗದ ಸದಸ್ಯ ದುಂಡಪ್ಪ ಇಟಕನ್ನವರ ಹೇಳಿದರು, ಈ ಸಂದರ್ಭದಲ್ಲಿ ಆತ್ಮೀಯ ಗೆಳೆಯರ ಬಳಗದ ಅಧ್ಯಕ್ಷ ನಂದೀಶ್ ಹಡಪದ, ಉಪಾಧ್ಯಕ್ಷ ಸಂಜಯ್ ಜಾಧವ, ಅಶೋಕ್ ಆಸಂಗಿ, ಸುವಾಸ್ ಔಟಿ, ಮಲ್ಲಿಕಾರ್ಜುನ್ ಸೌದಿ. ಪ್ರಶಾಂತ್ ರಾಮದುರ್ಗ್. ಬಸವರಾಜ್ ಪರೀಟ. ಎಪಿಎಂಸಿ ಉಪಾಧ್ಯಕ್ಷ ಸರ್ವ ನಿರ್ದೇಶಕ ಮಂಡಳಿ ಕಾರ್ಯದರ್ಶಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಹಾನಗಂಡಿ ಗ್ರಾಮದಿಂದ ಲೋಣಿ ಬಿಕೆ ಗ್ರಾಮಕ್ಕೆ ಸಿದ್ದೇಶ್ವರ ಮತ್ತು ಬೊಲಿಂಗೇಶ್ವರ ಮೂರ್ತಿ ಮೆರವಣಿಗೆ



**ಝಳಕಿ :** ಲೋಣಿ ಬಿಕೆ ಗ್ರಾಮದಲ್ಲಿ ಶ್ರೀ, ಸಿದ್ದೇಶ್ವರ ಮತ್ತು ಶ್ರೀ, ಬೊಲಿಂಗೇಶ್ವರ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮ ಫೆಬ್ರುವರಿ 3ರಂದುಶ್ರೀಶ್ರೀ,ಶ್ರೀ 1008 ಜಗ್ದುರುಗಳಾದ ಬಾಳೆಹುನ್ನೂರ ಸಾನಿಧ್ಯದಲ್ಲಿ ಹಮ್ಮಿಕೊಂಡಿದ್ದು, ಈ ಮೂರ್ತಿಗಳನ್ನು ಹಾನಗಂಡಿ, ಜಮಖಂಡಿ, ಬಬಲೇಶ್ವರ, ತಿಡಗುಂದಿ, ಬಳ್ಳೊಳ್ಳಿ ಮಾರ್ಗವಾಗಿ 5 ಎತ್ತಿನ ಬಂಡಿಗಳಲ್ಲಿ ಮೂರ್ತಿಗಳ ಭವ್ಯ ಮೆರವಣಿಗೆ ಸೊಮವಾರ ಸಾಯಂಕಾಲ ಬಳ್ಳೊಳ್ಳಿ ಗ್ರಾಮಕ್ಕೆ ತಲುಪಿ, ಗ್ರಾಮದ ಜೈ ಭವಾನಿ ಆವರಣದಲ್ಲಿ ಪೂಜೆ ಪುನಸ್ಕಾರ ನೆರವೆರಿಸಿ 2 ಗಂಟೆಗೆ ತೆರಳಿ ಮೆರವಣಿಗೆ ಲೋಣಿ ಬಿಕೆ ಗ್ರಾಮದೆಡೆಗೆ ಸಾಗಿತು.

ಈ ಸಂದರ್ಭದಲ್ಲಿ ಸಾನಿಧ್ಯ ವೇ.ಮೂ.ಮಹಾಂತೇಶ ಹಿರೇಮಠ, ಗೌಡೇಶ ಬಿ ಪಾಟೀಲ, ನಿಂಗಪ್ಪ ಮೇತ್ರಿ , ಕಮಲಾಬಾಯಿ ಮೇತ್ರಿ , ಮಲಕವ್ವ ಅವಜಿ, ಜಯಶ್ರೀ ಮಠಪತಿ, ಅಭಿಲಾಷ್ ಹಿರೇಮಠ , ಸಿದ್ದು ಹಾವಿನಾಳ, ಸಿದ್ದರಾಯ ಮೇತ್ರಿ, ಸಿದ್ದೇಶ್ವರ ಉತ್ಸವ ಮಂಡಳಿ, ಹಾಗೂ ಲೋಣಿ ಬಿಕೆ ಗ್ರಾಮದ ಭಕ್ತಾದಿಗಳು ಉಪಸ್ಥಿತರಿದ್ದರು.

# ಖಾಸಗಿ ಶಾಲಾ ವಾಹನಗಳ ಮೇಲೆ ಕ್ರಮ ಕೈಗೊಳ್ಳಲು ಗುರು ಗಂಗನ್ನವರ ಆಗ್ರಹ



**ಮೂಡಲಗಿ :** ವಲಯದ ಖಾಸಗಿ ಶಾಲಾ ವಾಹನಗಳು ಮತ್ತು ಚಾಲಕರು ಸರ್ಕಾರದ ಸಾರಿಗೆ ಇಲಾಖೆಯ ನಿಯಮಗಳನ್ನು ಗಾಳಿಗೆ ತೂರಿ ತಮಗೆ ಮನ ಬಂದಂತೆ ಕರ್ತವ್ಯ ಲೋಪ ಎಸಗುತ್ತಿರುವುದಲ್ಲದೇ ದೇಶದ ಉಜ್ವಲ ಭವಿಷ್ಯದ ಬುನಾದಿ ಆಗಬೇಕಿರುವ ವಿದ್ಯಾರ್ಥಿಗಳ ಜೀವ ಲೆಕ್ಕಿಸದೆ ವೇಗದ ಮಿತಿ ಮೀರಿ ಚಲಾಯಿಸುವ ನಿರ್ಲಕ್ಷ್ಯ ಧೋರಣೆ ಖಂಡಿಸಿ ಹಾಗೂ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಸಮಾಜ ಸೇವಕ ಗುರು ಗಂಗನ್ನವರ ಅವರು ತಹಸೀಲ್ದಾರ ಎಸ್ ಎ ಬಬಲಿ ಅವರಿಗೆ ಮನವಿ ನೀಡಿದರು.

ಈಗಾಗಲೇ ಇತ್ತೀಚೆಗೆ ಎರಡು ಶಾಲಾ ಬಸ್ಸುಗಳ ಅಪಘಾತ ಸಂಭವಿಸಿದ್ದು ಇಂತಹ ಘಟನೆಗಳು ಮತ್ತೆ ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು ಕೆಲವು ಖಾಸಗಿ ಶಾಲಾ ಆಡಳಿತ ಮಂಡಳಿಯವರು ಸಾರಿಗೆ ಇಲಾಖೆಯ ನಿಯಮಗಳನ್ನು ಪಾಲಿಸುತ್ತಿಲ್ಲ ಒಂದು ವಾರದೊಳಗೆ ಸಾರಿಗೆಇಲಾಖೆಯಎಲ್ಲನಿಯಮಗಳನ್ನುಕಟ್ಟುನಿಟ್ಟಾಗಿ ಪಾಲಿಸಲುಸೂಚನೆನೀಡಬೇಕು.ಕ್ರಮಜರುಗಿಸದಿದ್ದಲ್ಲಿ ಇಲ್ಲಿನ ಕಲ್ಮೇಶ್ವರ ವೃತ್ತದಲ್ಲಿ ಬೆಳಿಗ್ಗೆ ಖಾಸಗಿ ಶಾಲಾ ವಾಹನಗಳನ್ನು ತಡೆದು ಸೋಶಿಯಲ್ ಮೀಡಿಯಾ ಮುಖಾಂತರ ಸಂಬಂಧ ಪಟ್ಟ ಅಧಿಕಾರಿಗಳ ನೇತೃತ್ವದಲ್ಲಿ ತಪಾಸಣೆ ನಡೆಸಲಾಗುವುದು ಮತ್ತು ತಹಸೀಲ್ದಾರ ಅವರಿಗೆ ಕೊಡುವ ಈ ಮನವಿಯ ಜೊತೆಗೆ ಮಾಹಿತಿ ಹಕ್ಕು ಅಡಿಯಲ್ಲಿ ಪಡೆದ ಖಾಸಗಿ ಶಾಲಾ ವಾಹನಗಳು ಪಾಲಿಸಬೇಕಾದ ನಿಯಮಗಳ ಪಟ್ಟಿಯನ್ನು ಲಗತ್ತಿಸಲಾಗಿದೆ . ಇಂತಹ ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಲು ತಾಲೂಕಿನ ಸಮಸ್ತ ಪಾಲಕರು ಹಾಗೂ ಪೋಷಕರ ಪರವಾಗಿ ವಿನಂತಿಸಲಾಗಿದೆಎಂದುಮನವಿಯಲ್ಲಿತಿಳಿಸಲಾಗಿದೆ.

# ಬೇಡ ಜಂಗಮ ಸಮಾಜದಿಂದ: ಶಾಸಕ ನಾಡಗೌಡರಿಗೆ ಮನವಿ



**ತಾಳಿಕೋಟಿ :** ಪಟ್ಟಣದ ಬೇಡ ಜಂಗಮ ಸಮಾಜ ಭಾಂದವರ ಕಾರ್ಯಕ್ರಮಗಳನ್ನು ನೆರವೇರಿಸಲು ಸಮುದಾಯ ಭವನದ ಅಗತ್ಯವಿದ್ದು ಇದ–ಕ್ಕೆ ಅಗತ್ಯವಿರುವ ನಿವೇಶನವನ್ನು ಮಂಜೂರು ಮಾಡಬೇಕೆಂದುತಾಲೂಕಬೇಡಜಂಗಮಸಮಾಜದ ವತಿಯಿಂದ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ, ಶಾಸಕ ಸಿ.ಎಸ್.ನಾಡಗೌಡ ಇವರಿಗೆ ಮನವಿ ಸಲ್ಲಿಸಲಾಯಿತು. ಸೋಮವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜ್ಯೋತಿಷ್ಯ ರತ್ನ ಪರಮ ಪೂಜ್ಯ ರಾಮಲಿಂಗಯ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ಸಮಾಜ ಬಾಂಧವರು ಶಾಸಕ ಅಪ್ಪಾಜಿ ನಾಡಗೌಡರನ್ನು ಸಮಾಜದ ವತಿಯಿಂದ ಭೇಟಿ ಮಾಡಿ ಅವರನ್ನು ಸನ್ಮಾನಿಸಿ,ತಮ್ಮ ಸಮಾಜದ ಕಾರ್ಯಗಳಿಗಾಗಿಸಮುದಾಯಭವನದಅಗತ್ಯವಿದ್ದು ಆದಷ್ಟು ಬೇಗ ನಿವೇಶನವನ್ನು ಮಂಜೂರು ಮಾಡಬೇಕೆಂದು ಕೇಳಿಕೊಂಡರು. ಮನವಿ ಸ್ವೀಕರಿಸಿ ಮಾತನಾಡಿದ ಶಾಸಕ ಅಪ್ಪಾಜಿ ನಾಡಗೌಡರು ಇದು ಗುರುವಿನ ಸ್ಥಾನದಲ್ಲಿರುವ ಸಮಾಜ ನಿಮ್ಮ ಬೇಡಿಕೆಗೆ ಸ್ಪಂದಿಸುವುದು ನನ್ನ ಕರ್ತವ್ಯವಾಗಿದೆ ಆದಷ್ಟು ಬೇಗ ಇದಕ್ಕಾಗಿ ಕ್ರಮವಹಿಸಲು ಪುರಸಭೆ ಮುಖ್ಯಾಧಿಕಾರಿಗೆ ಸೂಚಿಸುತ್ತೇನೆ ಎಂದು ತಿಳಿಸಿ ಸ್ಥಳದಲ್ಲಿಯೇ ಇದ್ದ ಮುಖ್ಯಾಧಿಕಾರಿ ಮೋಹನ್ ಜಾಧವ್ ಅವರೊಂದಿಗೆ ಮಾತನಾಡಿ ಆದಷ್ಟು ಬೇಗ ನಿವೇಶನವನ್ನು ನೀಡಲು ಕ್ರಮವಹಿಸಿ ಎಂದು ಸೂಚನೆ ನೀಡಿದರು.

ಈ ಸಮಯದಲ್ಲಿ ಸಮಾಜದ ಗಣ್ಯರಾದ ವಿ.ವಿ. ಸಂಘದ ಅಧ್ಯಕ್ಷ ವಿ.ಸಿ.ಹಿರೇಮಠ, ತಾಲೂಕ ಬೇಡ ಜಂಗಮ ಸಮಾಜದ ಅಧ್ಯಕ್ಷ ಶರಣಯ್ಯ ಹಿರೇಮಠ, ಮುತ್ತುರಾಜ ಜಾಗೀರದಾರ,ಪಂಚಯ್ಯಹಿರೇಮಠ ',ಮಲ್ಲಯ್ಯ ವಿಭೂತಿಮಠ,ಡಾ. ಸೋಮಶೇಖರ್ ಹಿರೇಮಠ, ಶಂಕ್ರಯ್ಯ ಗದಗಿಮಠ, ಸಂಗಯ್ಯ ಹಿರೇಮಠ, ಎನ್.ಸಿ.ಡೋಣೂರಮಠ, ಮಹಾಂತೇಶ ಮಠ ಮತ್ತಿತರರು ಇದ್ದರು.

# ಕಂಠಿ ಶಾಲೆಯಲ್ಲಿ ಜರುಗಿದ ವಿಜ್ಞಾನ ವಸ್ತು ಪ್ರದರ್ಶನ ಹಾಗೂ ಮಕ್ಕಳ ಸಂತೆ ಕಾರ್ಯಕ್ರಮ

**ಇಲಕಲ್ :** ನಗರದ ಶಾಸಕರ ಸರಕಾರಿ ಮಾದರಿ (ಕಂಠಿಯವರ) ಪ್ರಾಥಮಿಕ ಶಾಲೆಯಲ್ಲಿ ವಿಜ್ಞಾನವಸ್ತು ಪ್ರದರ್ಶನವನ್ನು ಕನ್ನಡದ ಅಕ್ಷರ ತೇರನ್ನು, ಕಂಠಿಯವರ ಭಾವಚಿತ್ರವನ್ನು ಇಟ್ಟು ಎಳೆಯುವ ಮೂಲಕ ವೇದಿಕೆ ಮೇಲಿದ್ದ ಗಣ್ಯರು ಉದ್ಘಾಟಿಸಿದರು ಉದ್ಘಾಟನಾ ಪರ ಮಾತನಾಡಿದ ಕಲ್ಯಾಣ ಕರ್ನಾಟಕ ಗ್ರಾನೈಟ್ ಅಸೋಸಿಯನ್ ಅಧ್ಯಕ್ಷರಾದ ಬಾಲನಗೌಡ ಅವರು ತಂದೆ ತಾಯಿಗಳ ನಂತರ ಶಿಕ್ಷಕರೇ ಎರಡನೇ ದೇವರು ಎನ್ನುತ್ತಾ ವಿಶೇಷ ಆಸಕ್ತಿಯಿಂದ ಕಲಿಸಬೇಕೆಂದು ಶಿಕ್ಷಕರಿಗೆ ಕಿವಿ ಮಾತು ಹೇಳಿದರು.



ಮುಖ್ಯ ಅತಿಥಿಗಳಾಗಿ ವಿಜ್ಞಾನ ವಸ್ತು ಪ್ರದರ್ಶನವನ್ನು ಉದ್ಘಾಟಿಸಿದ ವಿಜಯಕುಮಾರ ಹಂಚಾಟೆ ಮಾತನಾಡುತ್ತಾ ಎಸ್.ಡಿ.ಎಂ.ಸಿ ಸದಸ್ಯರು ಮತ್ತು ಶಿಕ್ಷಕರು ಸೇರಿಕೊಂಡು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸುವಂತೆ ತಿಳಿಸಿ ಶಾಲೆಯ ವೈಶಿಷ್ಟ ?ಯತೆಯನ್ನು ಕುರಿತು ಮಾತನಾಡಿದರು. ಅತಿಥಿಗಳಾಗಿ ಮುಖ್ಯ ಗುರು ಸಂಗಣ್ಣ ಗದ್ದಿ ಮಕ್ಕಳಲ್ಲಿ ಹುದುಗಿರುವ ಶಕ್ತಿಯನ್ನು ಹೊರ ತರುವುದೇ ಶಿಕ್ಷಣ ಎಂದರು. ಅಧ್ಯಕ್ಷತೆಯನ್ನು ಎಸ್.ಡಿ.ಎಂ.ಸಿ ಉಪಾಧ್ಯಕ್ಷ ಪ್ರಶಾಂತ ಹಂಚಾಟೆ ವಹಿಸಿ ಶಿಕ್ಷಣವೆಂದರೆ ನಮ್ಮ ಕಾಲು ಮೇಲೆ ನಾವೇ ನಿಂತುಕೊಳ್ಳುವುದು ಆಗಬೇಕು ಎಂದರು ಶಾಸಕರ ವಿಜಯಾನಂದ ಕಾಶಪ್ಪನವರ ಹೊಸ ಕಟ್ಟಡಗಳ ನಿರ್ಮಾಣಕ್ಕೆ 53 ಲಕ್ಷ ರೂ. ಅನುದಾನ ನೀಡಿದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು.

ದೀಪಾ ಕುಂಬಾರ ಹಾಗೂ ಸಂಗಡಿಗ–ರಿಂದ ಪ್ರಾರ್ಥನೆ, ಕವಿತಾ ಮಸರಕಲ್ಲ ಸ್ವಾಗತಿಸಿದರು, ಎಸ್.ಡಿ.ಎಂ.ಸಿ ಸದಸ್ಯರಾದ ಮಹಾಂತೇಶ ಗೊರಜನಾಳ, ಬಸವರಾಜ ಸೂಡಿ, ಮುತ್ತಣ್ಣ ಬೆಂಗಳೂರು, ರಾಜು ಅಂಗಡಿ, ಅನಸೂಯ ಕುರಹಟ್ಟಿ, ವೈಶಾಲಿ ಘಂಟಿ, ಸಾವಿತ್ರಿ ನಾಲವಾಡದ, ಸಿದ್ದಮ್ಮ ಕಲಗುಡಿ, ಮೊದಲಾದವರು ಉಪಸ್ಥಿತರಿದ್ದರು ಮುಖ್ಯಗುರು ಬಸವರಾಜ ಹೊರಗಿನಮಠ ಪ್ರಾಸ್ತಾವಿಕವಾಗಿ ಮಾತನಾಡಿದರು, ನಿರೋಷಾ ಭೋವಿ ನಿರೂಪಿಸಿದರು, ಬಸವರಾಜ ಬಂಡಿ ವಂದಿಸಿದರು. ವಿದ್ಯಾರ್ಥಿಗಳಿಂದ ಕಲೆ ಮತ್ತು ವಿಜ್ಞಾನ ಹಾಗೂ ಮ್ಯಾಟ್ರಿಕ್ ಮೇಳವನ್ನು ಯಶಸ್ವಿಯಾಗಿ ಪ್ರದರ್ಶನ ಮಾಡಲಾಯಿತು.

**ವರದಿ: ಕಾಸಿಂ –ಅಲಿಶಾ ಮಕಾನದರ್**

# ನೂತನ ಕಾರ್ಯದರ್ಶಿ ಯಲ್ಲಪ್ಪ ಬಂಡೇನವರ ಸನ್ಮಾನ



**ಇಂಡಿ :** ನೂತನವಾಗಿ ಆಯ್ಕೆಯಾಗಿರುವ ಜಿಲ್ಲಾ ಕಾಂಗ್ರೆಸ್ ಪಕ್ಷದ ಪ ಜಾತಿ ವಿಭಾಗದ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆ ಯಾದ ಯಲ್ಲಪ್ಪ ಲಾಯಪ್ಪ ಬಂಡೇನವರ ಅವರಿಗೆ ಸನ್ಮಾನ ಕಾರ್ಯಕ್ರಮ ಇಂಡಿ ನಗರದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಯಾಲಯದಲ್ಲಿ ನಡೆಯಿತು.

ಯಲಪ್ಪ ಬಂಡೇನವರ ಮಾತನಾಡಿ ಕಾಂಗ್ರೆಸ್ ಪಕ್ಷ ತನ್ನ ಮೇಲೆ ಇಟ್ಟಿರುವ ನಂಬಿಕೆಗೆ ಚ್ಯುತಿ ಬಾರದಂತೆ ಜನರ ಒಳಿತಿಗಾಗಿಯೇ ಕರ್ತವ್ಯ ನಿರ್ವಹಿಸುತ್ತೇನೆ ಜಿಲ್ಲಾ ಕಾಂಗ್ರೆಸ್ ಪ ಜಾತಿ ವಿಭಾಗದ ಸಂಘಟನಾ ಕಾರ್ಯದರ್ಶಿಯಾಗಿ ಜನಸೇವೆ ಮಾಡಲು ಮತ್ತು ತಮ್ಮ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಮೂಲಕ ಮತ್ತು ಪಕ್ಷದ ನೀತಿಗಳು ಮತ್ತು ಮಾರ್ಗಸೂಚಿಗಳಿಗೆ ಬದ್ಧರಾಗಿ ಉದ್ಭವಿಸಿದ ಸಮಸ್ಯೆಗಳನ್ನು ನಿಭಾಯಿಸಲು ಶ್ರಮದಿಂದ ಕಾರ್ಯವನ್ನು ನಿರ್ವಹಿಸುತ್ತೇನೆಂದರು

ನೂತನ ಸಂಘಟನಾ ಕಾರ್ಯದರ್ಶಿ ಯಲಪ್ಪ ಬಂಡೇನವರ ಅವರಿಗೆ ಇಂಡಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಸನ್ಮಾನಿಸಿ ಕಾರ್ಯಕ್ರಮದ ಬಗ್ಗೆ ಜಾವಿದ ಮೊಮೀನ ಮಾತನಾಡುತ್ತಾ ಚಾಲನೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಾವಿದ ಮೊಮೀನ,ಗ್ಯಾರಂಟಿ ಯೋಜನೆಯ ಅಧ್ಯಕ್ಷ ಪ್ರಶಾಂತ ಕಾಳೆ,ಜಿಲ್ಲಾ ಪ ಜಾತಿ ವಿಭಾಗದ ಕಾಂಗ್ರೆಸ್ ಉಪಾಧ್ಯಕ್ಷ ಮಲ್ಲಿಕಾರ್ಜುನ ಮಡ್ಡಿಮನಿ,ಕೆಪಿಸಿಸಿ ಪ ಜಾತಿ ವಿಭಾಗದ ಸಂಜು ಚವ್ಹಾಣ,ಕಾಂಗ್ರೆಸ್ ಹಿರಿಯ ಮುಖಂಡರಾದ ನಾಗೇಂದ್ರ ಮೇತ್ರಿ,ಹಾಗೂ ಭೀಮಣ್ಣ ಕವಲಗಿ,ಗ್ಯಾರಂಟಿ ಸದಸ್ಯರಾದ ಸಂಜು ನಾಯ್ಕೊಡಿ,ಮಲ್ಲಿಕಾರ್ಜುನ ಕಾಂಬಳೆ,ಸುಪುತ್ರ ಕಟ್ಟಿಮನಿ,ಭೀಮು ವಾಲಿಕಾರ,ಮಂಜು ವಾಲಿಕಾರ ಇನ್ನು ಅನೇಕರು ಭಾಗಿಯಾಗಿದ್ದರು.

# ಅನ್ನದಾತರಿಗೆ ವಿಶೇಷ ಸೌಲಭ್ಯ ನೀಡಲು ಬೆಳ್ಳಿ ಸಲಹೆ



**ವಿಜಯಪುರ :** ರೈತರ ಶೇರು ಹಣದಿಂದ ಸ್ಥಾಪಿಸಲ್ಪಟ್ಟ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರ ಸಮಗ್ರ ಏಳ್ಗೆಗಾಗಿ ಶ್ರಮಿಸಬೇಕೆಂದು ಸಹ ವಿಸ್ತರಣಾ ನಿರ್ದೇಶಕ ಡಾ. ರವೀಂದ್ರ ಬೆಳ್ಳಿ ಹೇಳಿದರು.

ಕೃಷಿಮೇಳದ ಬೃಹತ್ ವೇದಿಕೆಯಲ್ಲಿ ಇತ್ತೀಚೆಗೆ ನೂತನವಾಗಿ ಆಯ್ಕೆಯಾದ ಹಿಟ್ಟಿನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರನ್ನು ಸನ್ಮಾನಿಸಿ ಮಾತನಾಡಿದರು.

ಅನ್ನದಾತರು ಕೃಷಿಯಲ್ಲಿ ಇಂದು ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಹವಾಮಾನ ವೈಪರೀತ್ಯದಿಂದಾಗಿ ಅವರು ಬೆಳೆದ ಬೆಳೆ ಇಳುವರಿ ಕುಂಠಿತಗೊಂಡು ಮಾರುಕಟ್ಟೆಯಲ್ಲಿ ದರವೂ ಕಡಿಮೆಯಾದಾಗ, ನಿಜವಾಗಿಯೂ ಅವರ ಬದುಕು ದುಸ್ತರವಾಗುತ್ತದೆ. ಕೌಟುಂಬಿಕ ಅವಶ್ಯಕತೆಗಳನ್ನು ಪೂರೈಸಲು ಅಸಾಧ್ಯವಾಗುತ್ತಿದೆ. ಅದಕ್ಕಾಗಿ ರೈತರಿಂದ ಸ್ಥಾಪಿತವಾದ ಸಹಕಾರ ಸಂಘಗಳ ಪ್ರತಿನಿಧಿಗಳು ಆತನ ಏಳ್ಗೆಗಾಗಿ ಶ್ರಮಿಸಬೇಕೆಂದರು.

ಆಯ್ಕೆಯಾದ ನಿರ್ದೇಶಕ ಮಂಡಳಿಯ ಪರವಾಗಿ ಬಸವರಾಜ ಕಳಸಗೊಂಡ ಮಾತನಾಡಿ, ರೈತರಿಗಾಗಿ ಕಡಿಮೆ ಬಡ್ಡಿದರದಲ್ಲಿ ಸಾಲ, ಕಿಸಾನ್ ಕ್ರೆಡಿಟ್ ಕಾರ್ಡ ಸೌಲಭ್ಯ ಸೇರಿದಂತೆ ಅನೇಕ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದ್ದೇವೆ. ಜನರು ನಮ್ಮ ಮೇಲೆ ವಿಶ್ವಾಸವಿಟ್ಟು ಆಯ್ಕೆ ಮಾಡಿದ್ದು, ನಾವು ಕೂಡ ರೈತರಾಗಿದ್ದು, ರೈತರ ಸರ್ವೋದಯ ಅಭಿವೃದ್ದಿಗೆ ಶ್ರಮಿಸುವುದಾಗಿ ಹೇಳಿದರು.

ನೂತನವಾಗಿ ಆಯ್ಕೆಯಾದ ಶ್ರೀಕಾಂತ ಚೌಧರಿ, ಜಗನ್ನಾಥ ಚೌಧರಿ, ಬಸವರಾಜ ಕಳಸಗೊಂಡ, ಮಹ್ಮದಹುಸೇನ ವಾಲಿಕಾರ, ವಿಠ್ಠಲ ಸಾರವಾಡ, ರೇಣುಕಾ ಕಾಖಂಡಕಿ, ಲಲಿತಾ ಬಿರಾದಾರ, ಸಂಗಪ್ಪ ಕವಡಿಮಟ್ಟಿ, ದುಂಡಪ್ಪ ಬಗಲಿ, ಸಂತೋಷ ಲಮಾಣಿ, ಸುಭಾಸ ಯಂಬತ್ನಾಳ, ರಮೇಶ ಬಿಳೂರ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಿದ್ದನಗೌಡ ಬಿರಾದಾರ, ಶರಣು ಸಾಲಿ, ಈರಣ್ಣ ಕೆಟಗಡಲಿ, ಮಲಕು ಸಾಲಿ, ಮಹಾಂತೇಶ ಪಡನಾಡ, ಚಿನ್ನಪ್ಪ ತಿಕೋಟಿ, ಗೀತಾ ಚೌದ್ರಿ, ರೇಣುಕಾ ಶಿರಬೂರ, ಶಿಲ್ಪಾ ಬೀಳೂರ, ವಾಯ್. ಕೆ. ಭಾವಿಕಟ್ಟಿ, ಅಖಂಡಪ್ಪ ಕೊರ್ತಿ, ಕಲಪ್ಪ ತಿಕೋಟಿ, ರವಿ ಅಗಸರ ಸೇರಿದಂತೆ ಕೃಷಿ ವಿವಿ ಸಿಬ್ಬಂದಿ, ರೈತರು ಉಪಸ್ಥಿತರಿದ್ದರು.

# ನೈತಿಕತೆ ಅಧ: ಪತನವೇ ಕಾನೂನು ಮತ್ತು ಹಕ್ಕುಗಳ ಹುಟ್ಟಿಗೆ ಕಾರಣ: ಸರನಾಡಗೌಡ




**ವಿಜಯಪುರ :** ನೈತಿಕ ಅಧ:ಪತನದಿಂದ ಕಾನೂನು ಮತ್ತು ಹಕ್ಕುಗಳು ಹುಟ್ಟಿಕೊಂಡಿವೆ ಎಂದು ಅಂಜುಮನ್ ಕಾನೂನು ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಉಜ್ವಲ ಸರನಾಡಗೌಡ ಹೇಳಿದರು.

ವಿಜಯಪುರ ಪ್ರೊಬಸ್ ಕ್ಲಬ್ ಉತ್ತರ ವಲಯ ಆಯೋಜಿಸಿದ ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರನ್ನು ಉದ್ದೇಶಿಸಿ ಮಾತನಾಡಿದರು.

ಮಾನವನು ಸಕಲ ಜೀವ ರಾಶಿಗಳಿಗಿಂತ ಭಿನ್ನನಾಗಿದ್ದಾನೆ. ಬುದ್ಧಿವಂತನಾದ ಆತ ಸಮಾಜದಲ್ಲಿ ಗೌರವಯುತವಾಗಿ ಜೀವಿಸುವುದು ಮುಖ್ಯವಾಗಿದೆ. ಪ್ರತಿಯೊಬ್ಬರೂ ನಾನು ದುರ್ಬಲ ಅನ್ನುವದೇ ಅಪರಾಧವಾಗಿದೆ. ಅದಕ್ಕಾಗಿ ಶಿಕ್ಷಣವನ್ನು ಪಡೆದುಕೊಂಡು ಆರೋಗ್ಯವಂತರಾಗಿ ಬಾಳಿ, ಜಾಗೃತರಾಗುವುದರಿಂದ ಸ್ವಾಸ್ತ ?ಯಸಮಾಜ ಸಾಧ್ಯ. ನೈತಿಕತೆಯ ಪ್ರಜ್ಞೆ ಕಳೆದುಕೊಂಡಾಗ ಶಿಸ್ತಿನ ಬದುಕು ಸಾಗಿಸಲು ಕಾನೂನು ಮತ್ತು ಹಕ್ಕುಗಳು ಹುಟ್ಟಿಕೊಂಡವು ಎಂದು ಅವರು ಹೇಳಿದರು.

ವೃದ್ಧಾಪ್ಯಕ್ಕೆ ಬಂದ ಮೇಲೆ ಮಕ್ಕಳು ಅವರನ್ನು ನೋಡಿಕೊಳ್ಳುವುದು ಜವಾಬ್ದಾರಿಯಾಗಿದೆ. ಒಂದು ವೇಳೆ ಹಿರಿಯ ನಾಗರಿಕರನ್ನು ರಕ್ಷಣೆ ಮಾಡದಿದ್ದರೆ ಅವರಿಗೆ ಜೀವನೋಪಾಯಕ್ಕಾಗಿ ಹಣವನ್ನು ನೀಡಬೇಕಾಗುತ್ತದೆ. ಒಂದೊಮ್ಮೆ ಹಿರಿಯರನ್ನು ಕಡೆಗಣಿಸಿದರೆ ಕಾನೂನಿನ ಪ್ರಕಾರ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂದರು.

ಶಾರದಾ ಐಹೊಳೆ ಅಧ್ಯಕ್ಷತೆ ವಹಿಸಿದ್ದರು.

ಮಹಾದೇವ ಹಾಲಳ್ಳಿ ಸ್ವಾಗತಿಸಿ, ನಿರೂಪಿಸಿದರು.

ಸುಭಾಷ ಬೆಟಗೇರಿ ಅತಿಥಿಗಳನ್ನು ಪರಿಚಯಿಸಿದರು.

ಜಗದೀಶ ಮೋಟಗಿ ವಂದಿಸಿದರು.

ಶಿವಾನಂದ ಜಂಗಿನಮಠ ಮತ್ತು ಅತಿಥಿಗಳನ್ನು ಸನ್ಮಾನಿಸಲಾಯಿತು. ಸುಮಾರು 60 ಕ್ಕಿಂತ ಹೆಚ್ಚು ಹಿರಿಯ ನಾಗರಿಕರು ಭಾಗವಹಿಸಿದ್ದರು.

# ಆಧುನಿಕ ಭರಾಟೆಯಲ್ಲಿ ನಾಟಕ ಕಲೆ ನಶಿಸುತ್ತಿದೆ: ಅಸ್ಕಿ



**ತಾಳಿಕೋಟೆ :** ಬೈಲಾಟ, ನಾಟಕ, ನೃತ್ಯ ಎಂಬುವುಗಳು ಇಂದಿನ ಆಧುನಿಕ ಬರಾಟೆಯ ಟಿವಿ ಮಾದ್ಯಮದ ದಾರವಾಹಿ ಮತ್ತು ಸಿನಿಮಾಗಳಿಂದ ನಶಿಸುತ್ತಾ ಬರತೊಡಗಿವೆ ಬೆಲೆ ಕಟ್ಟಲಾಗದ ಕಲೆ ಹುಟ್ಟಿಕೊಂಡಿರುವದು ಉತ್ತರ ಕರ್ನಾಟಕದ ಜನರ ನಿತ್ಯ ಬಧುಕಿನಿಂದಾಗಿದೆ ಎಂದು ಅಸ್ಕಿ ಪೌಂಡೇಶನ್ ಅಧ್ಯಕ್ಷ ಕಾಂಗ್ರೇಸ್ ಮುಖಂಡ ಸಿ.ಬಿ.ಅಸ್ಕಿ ಅವರು ಹೇಳಿದರು.

ಬುಧವಾರರಂದು ತಾಲೂಕಿನ ಬಳಗಾನೂರ ಗ್ರಾಮದಲ್ಲಿ ಶ್ರೀ ನೀಲಗಂಗಾಂಬಿಕಾ ದೇವಿ ಜಾತ್ರಾ ಮಹೋತ್ಸವ ಅಂಗವಾಗಿ ಹಮ್ಮಿಕೊಳ್ಳಲಾದ ಸಾವು ತಂದ ಸೌಭಾಗ್ಯ ಎಂಬ ಸಾಮಾಜಿಕ ನಾಟಕವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಉತ್ತರ ಕರ್ನಾಟಕ ಹಳ್ಳಿಗಾಡಿನ ಬಧುಕಿನಲ್ಲಿ ನಿತ್ಯ ನಡೆಯುತ್ತಿರುವ ಸನ್ನಿವೇಶಗಳನ್ನು ಆದಾರಿಸಿ ನಾಟಕ ಕಲೆ ಎಂಬುದು ಹುಟ್ಟುಕೊಂಡಿದೆ ಆದರೆ ಕಲಾವಿದರು ತಮ್ಮ ಬಧುಕಿಗಾಗಿ ಸಾಕಷ್ಟು ಕಡೆಗಳಲ್ಲಿ ನಾಟಕ ಕಲೆಯನ್ನು ಪ್ರದರ್ಶಿಸುತ್ತಾ ಸಾಗಿದರೂ ಕೂಡಾ ಅದನ್ನು ನೋಡಲು ಜನರು ಬರುತ್ತಿಲ್ಲಾ ಇದಕ್ಕೆ ಮುಖ್ಯ ಕಾರಣ ಇಂದಿನ ಟಿವಿಮಾದ್ಯಮದ ದಾರವಾಹಿ, ಸಿನಿಮಾಗಳು ಜನರ ದಾರಿಯನ್ನು ತಪ್ಪಿಸುತ್ತಿವೆ ನಾಟಕದ ಕಲೆಯಲ್ಲಿ ಜೀವನದ ಬಧುಕನ್ನು ತಿದ್ದುವಂತಹ ಕಾರ್ಯಗಳು ನಡೆದರೆ ಟಿವಿ ಮಾದ್ಯಮದ ದಾರವಾಹಿಗಳಿಂದ ಮನೆಯಲ್ಲಿ ಕಲಹಗಳು ಉದ್ಬವಿಸುತ್ತಾ ಸಾಗಿವೆ ಇದನ್ನು ನಾವು ನೀವು ನಿತ್ಯ ನೋಡುತ್ತಿದ್ದೇವೆ ಆದರೆ ನಮ್ಮ ಬಧುಕು ದಾರವಾಹಿಗಳಿಂದ ಆಚೆ ಬರದಿರುವದು ದುರದೃಷ್ಠಕರವಾಗಿದೆ ಎಂದು ವಿಷಾದಿಸಿದ ಅವರು ಬಳಗಾನೂರ ಗ್ರಾಮದಲ್ಲಿ ಶ್ರೀ ನೀಲಗಂಗಾಂಬಿಕಾ ದೇವಿಯ ಜಾತ್ರೋತ್ಸವವನ್ನು ಈ ಭಾರಿ ಪ್ರತಿವರ್ಷಕ್ಕಿಂತಲೂ ಅದ್ದೂರಿಯಾಗಿ ಜರುಗಿಸುವದರೊಂದಿಗೆ ಎಲ್ಲರಲ್ಲಿ ಭಕ್ತಿಯ ಪರಾಕಾಷ್ಠೆಯನ್ನು ಹೆಚ್ಚಿಸುವಂತಹ ಕಾರ್ಯ ಮಾಡಲಾಗಿದೆ ಈ ಜಾತ್ರೆಯ ಅಂಗವಾಗಿ ನಾಟಕ, ಜಾನಪದ ಅಲ್ಲದೇ ವಿವಿಧ ಮನರಂಜನೆಗಳನ್ನು ಆಯೋಜಿಸಿ ಕಲಾವಿದರ ಬಧುಕು ಸುಂದರಗೊಳಿಸಲು ಮುಂದಾಗಿರುವದು ಶ್ಲಾಘನೀಯವಾಗಿದೆ ಎಂದರು.

ಇನ್ನೋರ್ವ ಸಮಾಜ ಸೇವಕ ವಿರೇಶಗೌಡ ಬಾಗೇವಾಡಿ ಅವರು ಮಾತನಾಡಿ ಗ್ರಾಮೀಣ ಸೊಗಡಿನ ನಾಟಕ, ಬೈಲಾಟ ಕಲೆಗಳು ಇನ್ನೂ ಜೀವಂತವಾಗಿ ಉಳಿದುಕೊಂಡಿರುವದು ಹೆಮ್ಮೆಯ ಸಂಗತಿಯಾಗಿದೆ ಈ ನಾಟಕಗಳಲ್ಲಿ ನಮ್ಮ ದೇಶದ ಸಂಸ್ಕೃತಿ, ಸಂಸ್ಕಾರವನ್ನು ಬಿತ್ತುವಂತಹ ಸನ್ನಿವೇಶಗಳು ನಡೆಯುತ್ತಿರುವದು ಶ್ಲಾಘನೀಯವಾಗಿದೆ ಬಳಗಾನೂರ ಗ್ರಾಮದ ಶ್ರೀ ನೀಲಗಂಗಾಂಬಿಕಾ ದೇವಿಯ ಜಾತ್ರೋತ್ಸವ ಅಂಗವಾಗಿ 5 ದಿನಗಳ ಕಾಲ ವಿವಿಧ ಕಲಾವಿದರನ್ನು ಕರೆಯಿಸಿ ಪ್ರೋತ್ಸಾಹಿಸಿ ವೈಭವ ಪೂರಿತವಾಗಿ ಜಾತ್ರೆಯನ್ನು ಮಾಡುತ್ತಿರುವದು ಊರಿನ ಹಿರಿಮೆ ಇನ್ನಷ್ಟು ಹೆಚ್ಚಿಸಿದೆ ಎಂದರು.

ಇನ್ನೋರ್ವ ಮುಖ್ಯ ಅತಿಥಿ ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್.ಎಸ್.ಪಾಟೀಲ(ಕೂಚಬಾಳ) ಅವರು ಇಂದಿನ ದಿನಮಾನದಲ್ಲಿ ಕಲಾವಿದರು ಬಧುಕು ಕಟ್ಟಿಕೊಳ್ಳಲು ಶ್ರಮಿಸುತ್ತಿರುವ ಬಗ್ಗೆ ವಿವರಿಸಿದರಲ್ಲದೇ ಕಲಾವಿದರ ಬಧುಕು ಕಟ್ಟಿಕೊಳ್ಳುತ್ತಿರುವದು ಗ್ರಾಮೀಣ ಜನರಿಂದಾಗಿದೆ ಅದನ್ನು ಉಳಿಸಿ ಬೆಳೆಸುವದರ ಜೊತೆಗೆ ಪ್ರೋತ್ಸಾಹಿಸುವಂತಹ ಕಾರ್ಯ ಬಳಗಾನೂರ ಗ್ರಾಮದ ಜನರು ಮಾಡಿರುವದು ಹೆಮ್ಮೆಯ ಸಂಗತಿ ಎಂದರು.

ಈ ಸಮಯದಲ್ಲಿ ಮುಖಂಡರುಗಳಾದ ದ್ಯಾಮನಗೌಡ ಪಾಟೀಲ, ಎಸ್.ಆಯ್. ಕಡಕೋಳ, ಮಲ್ಲಣ್ಣ ದೋರನಳ್ಳಿ, ಎಂ.ಬಿ.ಅಲದಿ, ಕಲ್ಲಪ್ಪ ಮಡಿವಾಳರ, ಶ್ರೀಕಾಂತಗೌಡ ಬಿರಾದಾರ, ಬಾಪುಗೌಡ ಬಿರಾದಾರ, ಶಿವಣ್ಣ ದೋರನಳ್ಳಿ, ಶಿವಲಿಂಗಪ್ಪ ಪಡಶೆಟ್ಟಿ, ಶಿವನಗೌಡ ಬಿರಾದಾರ, ಹೂವಪ್ಪಗೌಡ ಬಿರಾದಾರ, ಸಿದ್ರಾಮ ಅಲದಿ, ಬಸನಗೌಡ ದೋರನಳ್ಳಿ, ಚಂದ್ರಶೇಖರ ಅಲದಿ, ಪ್ರಭು ಪತ್ತೇಪೂರ, ಅಮರೇಶ ಪಾಟೀಲ, ಬಸವರಾಜ ಜೀರಲಭಾವಿ, ಮೊದಲಾದವರು ಉಪಸ್ಥಿತರಿದ್ದರು.

# ರೇಷ್ಮಾಬೇಗಂ ವಡ್ಡಟ್ಟಿಯ ಯೋಗ ಸಾಧನೆಗೆ ಒಲಿದ ರಾಜ್ಯ ಯುವ ಪ್ರಶಸ್ತಿ



**ಕೊಪ್ಪಳ :** ತಾಲೂಕಿನ ಅಳವಂಡಿ ಹೋಬಳಿಯ ಘಟ್ಟರಡ್ಡಿಹಾಳ ಗ್ರಾಮದ ಮುಸ್ಲಿಂ ಯುವತಿ ರೇಷ್ಮಾ ಬೇಗಂ ರಾಜಾಸಾಬ ವಡ್ಡಟ್ಟಿ ತನ್ನ ನಿರಂತರ ಪರಿಶ್ರಮ ಮತ್ತು ಛಲದಿಂದ ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ ನೀಡುವ ರಾಜ್ಯಮಟ್ಟದ ಪ್ರತಿಷ್ಠಿತ ರಾಜ್ಯ ಯುವ ಪ್ರಶಸ್ತಿಗೆ ಭಾಜನರಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲೂಕಿನ ಸವಣೂರಿನಲ್ಲಿ ಮಾಜಿ ಸಂಸದ ನಳಿನಕುಮಾರ್ ಕಟೀಲ್ ಪ್ರದಾನ ಮಾಡಿದರು.

ದಕ್ಷಿಣ ಕನ್ನಡ ಜಿಲ್ಲಾಡಳಿತ,ಜಿಲ್ಲಾ ಪಂಚಾಯತ, ಯುವ ಸಬಲಿಕರಣ ಮತ್ತು ಕ್ರೀಡಾ ಇಲಾಖೆ ಮಂಗಳೂರು, ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ ಬೆಂಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಯುವಜನ ಒಕ್ಕೂಟಗಳ ವತಿಯಿಂದ ಜಿಲ್ಲಾ ಯುವ ಸಮಾವೇಶ ತರಬೇತಿ ಕಾರ್ಯಾಗಾರ, ರಾಜ್ಯ ಮಟ್ಟದ ಜನಪದ ನೃತ್ಯ ಸ್ಪರ್ಧೆ ಮತ್ತು ರಾಜ್ಯ ಯುವ ಪ್ರಶಸ್ತಿ ಪ್ರದಾನ ಸಮಾರಂಭ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ನಡೆಯಿತು.

ಕಾರ್ಯಕ್ರಮದ ಉದ್ಘಾಟನೆ ಮಾಡಿದ ಮಾಜಿ ಸಂಸದ ನಳಿನ್ ಕುಮಾರ್ ಕಟೀಲ ಮಾತನಾಡಿ, ರಾಜ್ಯದ 31 ಜಿಲ್ಲೆಗಳಿಂದ ಆಯ್ಕೆಯಾದ ಯುವ ಪ್ರತಿಭೆಗಳು ಇಂದು ನಮ್ಮ ಪುತ್ತೂರಿಗೆ ಬಂದಿರುವುದು ಬಹಳ ಸಂತೋಷದ ವಿಷಯ, ಈ ತರಹದ ಇನ್ನು ಹೆಚ್ಚಿನ ಕಾರ್ಯಕ್ರಮ ಜರುಗಲಿ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಯುವ ಪ್ರತಿಭೆಗಳು ಬೆಳೆಯಲಿ, ರಾಜ್ಯ ಯುವ ಪ್ರಶಸ್ತಿಗೆ ಆಯ್ಕೆಯಾದ ಸಾಧಕರಿಗೆ ಅಭಿನಂದನೆ ಸಲ್ಲಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸುಳ್ಯ ವಿಧಾನಸಭಾಕ್ಷೇತ್ರಶಾಸಕಿಭಾಗೀರತಿಮುರುಳ್ಯಾ ಮಾತನಾಡಿ ರಾಜ್ಯದ ಎಲ್ಲ ಮೂಲೆಗಳಿಂದ ಯುವಪ್ರತಿಭೆಗಳು ಇಂದು ತಮ್ಮ ಕ್ಷೇತ್ರಕ್ಕೆ ಬಂದಿರುವುದು ಹಾಗೂ ನಾನು ನಿಮ್ಮೆಲ್ಲರಿಗೆ ರಾಜ್ಯ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ನನ್ನ ಭಾಗ್ಯ, ನಾನು ಕೂಡಾ ಯುವತಿ ಸಂಘಟನೆಯಿಂದ ಈ ಸ್ಥಾನಕ್ಕೆ ತಲುಪಲು ಸಾಧ್ಯವಾಯಿತು ಎಂದರು.

ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ರಾಜ್ಯಾಧ್ಯಕ್ಷ ಡಾ. ಜಾನಪದ ಎಸ್. ಬಾಲಾಜಿ ಹಾಗೂ ರಾಜ್ಯ ಪ್ರದಾನ ಕಾರ್ಯದರ್ಶಿ ಸುರೇಶ್ ರೈ ಸೂಡಿಮುಳ್ಳು ಮಾತನಾಡಿ ಹಲವು ವರ್ಷಗಳಿಂದ ನಾವು ನಮ್ಮ ತಂಡ ರಾಜ್ಯದ ವಿವಿಧ ಮೂಲೆ ಮೂಲೆಗಳಿಗೂ ಹೋಗಿ ಅಲ್ಲಿನ ಹೊಸ ಪ್ರತಿಭೆಗಳನ್ನು ಹೊರಹಾಕುವ ಪ್ರಯತ್ನದಲ್ಲಿದ್ದೇವೆ, ಈ ವರ್ಷ 2024–25ನೇ ಸಾಲಿನ ರಾಜ್ಯ ಯುವ ಪ್ರಶಸ್ತಿ ಪ್ರದಾನವು ಪೂತ್ತುರಿನಲ್ಲಿ ನಡೆಯುತ್ತಿದೆ ಹೀಗೆ ಎಲ್ಲ 31 ಜಿಲ್ಲೆಗಳಿಂದ ಇಲ್ಲಿಯವರೆಗೆ ಬಂದು ಪ್ರಶಸ್ತಿ ಪಡೆದು ಇತರರಿಗೆ ಮಾದರಿಯಾಗಿದ್ದಿರಿ ನಿಮಗೆಲ್ಲ ಅಭಿನಂದನೆಗಳು ಎಂದರು.

ವೇದಿಕೆಯಲ್ಲಿ ಅಥಿತಿಗಳಾಗಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನ ನಿರ್ದೇಶಕ, ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಶಶಿಕುಮಾರ್ ರೈ ಬಾಲ್ಯೂಟ್ಟು, ಸವಣೂರು ಗ್ರಾ.ಪಂ.ಅಧ್ಯಕ್ಷೆ ಸುಂದರಿ ಬಿ.ಎಸ್. ಸವಣೂರು ಪ್ರಾ. ಕೃ.ಪ.ಸ.ಸಂಘದ ಅಧ್ಯಕ್ಷ ತಾರಾನಾಥ ಕಾಯಗ–ರ್, ಎಪಿಎಂಸಿ ಮಾಜಿ ಅಧ್ಯಕ್ಷ ದಿನೇಶ್ ಮೆದು, ಕಡಬ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ರಾಕೇಶ್ ರೈ ಕೆಡೆಂಜಿ, ಶಿವಪ್ರಸಾದ್ ಮೈಲೇರಿ, ಸವಣೂರು ಸ.ಉ.ಹಿ.ಪ್ರಾ.ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಅಶ್ರಫ್ ಜನತಾ, ಮುಖ್ಯ ಶಿಕ್ಷಕ ನಿಂಗರಾಜು, ಬೆಳಗಾವಿ ಯುವಜನ ಒಕ್ಕೂಟದ ಅಧ್ಯಕ್ಷ ಸಿದ್ದಣ್ಣ ದುರದುಂಡಿ, ಕೊಡಗು ಜಿಲ್ಲಾಧ್ಯಕ್ಷ ಸುಕುಮಾರ್ ಹಾಗೂ ಮುಂತಾದವರಿದ್ದರು.

ಜಿಲ್ಲಾ ಯುವಜನ ಒಕ್ಕೂಟದ ಅಧ್ಯಕ್ಷ ರಾಜ್ಯ ಕಾರ್ಯದರ್ಶಿ ಸುರೇಶ್ ರೈ ಸೂಡಿಮುಳ್ಳು ಸ್ವಾಗತಿಸಿದರು, ಮಾಮಚ್ಚನ್ ನಿರೂಪಿಸಿದರು.

ಜಿಲ್ಲೆ, ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಯೋಗ ಸ್ಪರ್ಧೆಯಲ್ಲಿ ಹಲವು ಬಹುಮಾನಗಳನ್ನು ಪಡೆದು ಹಲವಾರು ಮಕ್ಕಳನ್ನು ಯೋಗದಲ್ಲಿ ಪರಿಣಿತರನ್ನಾಗಿ ಮಾಡುವಲ್ಲಿ ಬಹುಮುಖ್ಯ ಪಾತ್ರವಹಿಸಿರುವ ಗ್ರಾಮೀಣ ಪ್ರತಿಭೆ ರೇಷ್ಮಾ ಅವರ ಸಾಧನೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಯುವ ಒಕ್ಕೂಟದ ಕೊಪ್ಪಳ ಜಿಲ್ಲಾಧ್ಯಕ್ಷ ಮತ್ತು ಕಲಬುರಗಿ ವಿಭಾಗೀಯ ಸಂಚಲಕ ಮಂಜುನಾಥ ಜಿ. ಗೊಂಡಬಾಳ ಅವರು ರಾಜ್ಯ ಘಟಕ–ಕ್ಕೆ ಶಿಫಾರಸ್ಸು ಮಾಡಿ ಪ್ರಶ್ತಿ ಕೊಡಿಸುವಲ್ಲಿ ಶ್ರಮಿಸಿದ್ದು ಇಬ್ಬರನ್ನೂ ಘಟ್ಟಿರಡ್ಡಿಹಾಳದ ಹಲವರು ಅಭಿನಂದಿಸಿದ್ದಾರೆ.



**ಇಂದು ಶ್ರೀ ಬಸವೇಶ್ವರ ಬ್ಯಾಂಕಿನ ನೂತನ ಅಧ್ಯಕ್ಷರು ಶ್ರೀ ಪ್ರಕಾಶ ತಪಶೆಟ್ಟಿಯವರಿಗೆ ಹಾಗೂ ನಿರ್ದೇಶಕರ ಮಂಡಳಿಗೆ ನಿವೃತ್ತ ಶಿಕ್ಷಣ ಅಧಿಕಾರಿ ಶ್ರೀಮತಿ ಸಿದ್ದಮ್ಮ ಪಾಟೀಲ್, ಸುಧಾ ಪಾಟೀಲ್, ಪ್ರೇಮ ರಾಠೋಡ, ಪತ್ರಕರ್ತರು ಶ್ರೀಶೈಲ್ ಬಿರಾದಾರ್, ವಿದ್ಯಾಶ್ರೀ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರು ವೀರಣ್ಣ ಬಂಗಾರಶೆಟ್ಟರವರ ನಿರ್ದೇಶಕ ಮಂಡಳಿ, ಹಾರುನ ಬೀಳಗಿ, ಆನಂದ ವಾಘಮೋಡೆ, ಡಾ. ಚಾಂದ ನದಾಫ ಗಣ್ಯ ಉದ್ದಿಮೆದಾರರು ಹಾಗೂ ಹಲವಾರು ಮಿತ್ರರು ಸನ್ಮಾನಿಸಿ ಶುಭ ಹಾರೈಸಿದರು**

# ಹೊಂಬಾಳಿ ಕಲಾ ಉತ್ಸವ ನೂರು ವರ್ಷ ಪೂರೈಸಲಿ: ಪ್ರೊ. ಅನಿಲ ವೈದ್ಯ



**ಗದಗ :** ಕಲೆ, ಸಂಗೀತ ಮನರಂಜನೆಗಾಗಿ ಮಾತ್ರವಲ್ಲದೇ ಮನೋವಿಕಾಸಕ್ಕಾಗಿ ಆಗಬೇಕು. ಯುವ ಜನತೆಗೆ ಕಲೆಯ ಬಗ್ಗೆ ಅಭಿರುಚಿ ಮೂಡಬೇಕು. ಆ ನಿಟ್ಟಿನಲ್ಲಿ ಅನೇಕ ವಿನೂತನ ಪ್ರಯತ್ನಗಳ ಮೂಲಕ ದಿಟ್ಟವಾಗಿ ಹೆಜ್ಜೆ ಹಾಕುತ್ತಿರುವ ಹೊಂಬಾಳಿ ಕಲಾ ಅಕಾಡೆಮಿಯ ಕಲಾ ಸೇವೆ ಶ್ಲಾಘನೀಯ. ಸಂಸ್ಥಾಪಕರಾದ ಮಂಜರಿ ಹೊಂಬಾಳಿಯವರ ಕೊಡುಗೆ ಕೇವಲ ಹೊಂಬಾಳಿ ಮನೆತನಕ್ಕೆ ಅಷ್ಟೇ ಅಲ್ಲದೇ ಸಂಗೀತ ಪರಂಪರೆಗೆ ತಮ್ಮ ಸಂಘಟನೆಯ ಮೂಲಕ ವಿಶಿಷ್ಟ ಕೊಡುಗೆ ನೀಡಲಿ ಎಂದು ಹೇಳಿದರು.

ಅವರು ಗದುಗಿನ ಶ್ರೀ ವೀರನಾರಾಯಣ ದೇವಸ್ಥಾನದಲ್ಲಿ ವಿಶ್ವಂ ಹೊಂಬಾಳಿ ಪ್ರತಿಷ್ಠಾನ, ಆರಾಧನಾ ಫೌಂಡೇಶನ್‌ನ ಹೊಂಬಾಳಿ ಕಲಾ ಅಕಾಡೆಮಿಯು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬೆಂಗಳೂರು ಸಹಯೋಗದಲ್ಲಿ ಆಯೋಜಿಸಿದ ಹೊಂಬಾಳಿ ಕಲಾ ಉತ್ಸವ–3 ರ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮತ್ತೋರ್ವ ಅತಿಥಿಗಳಾಗಿ ಭಾಗವಹಿಸಿದ ಹಿರಿಯ ನ್ಯಾಯವಾದಿಗಳು ಹಾಗೂ ವೀರನಾರಾಯಣ ವ, ತ್ರಿಕೂಟೇಶ್ವರ ಟ್ರಸ್ಟ್ ಕಮೀಟಿ ಸದಸ್ಯರಾದ ಶ್ರೀ ಡಿ.ಕೆ. ದೇಶಪಾಂಡೆ ಮಾತನಾಡಿ ವ್ಯಾಸಕೂಟ ಹಾಗೂ ದಾಸಕೂಟವು ಹರಿದಾಸ ಪರಂಪರೆಯ ಮೂಲಕ ಸಮಾಜ ಸುಧಾರಣೆ ಮಾಡಿತು. ಇದರಲ್ಲಿ ದಾಸಕೂಟದ ದಾಸ ಪರಂಪರೆಯ ದಾಸರ ಪದಗಳು ಇಂಪಾದ ಸಂಗೀತ ರಾಗ ಸಂಯೋಜನೆಗಳ ಮೂಲಕ ಜನಮಾನಸಕ್ಕೆ ತಲುಪಿದವು. ಆಧುನಿಕ ದಿನಮಾನಗಳಲ್ಲಿ, ಒತ್ತಡದ ಮತ್ತು ಧಾವಂತದ ಜಂಜಾಟದ ಬದುಕಿನಲ್ಲಿ ಇಂತಹ ದಾಸಪರಂಪರೆಯ ಭಕ್ತಿಗೀತೆಗಳು ಮನಸ್ಸಿಗೆ ನೆಮ್ಮದಿ ಮತ್ತು ಸಂತೋಷವನ್ನು ನೀಡುತ್ತವೆ. ಈ ನಿಟ್ಟಿನಲ್ಲಿ ಹೊಂಬಾಳಿ ಕಲಾ ಅಕಾಡೆಮಿಯು ಪ್ರತಿವರ್ಷ ದಾಸವಾಣಿಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಸ್ವಾಗತಾರ್ಹವಾಗಿದೆ ಎಂದು ಹೇಳಿದರು.

ಸಮಾರಂಭವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮಂಗಳಾ ತಾಪಸ್ಕರ ಮಾತನಾಡಿ ಸಾಮಾಜಿಕ ಕಳಕಳಿಯ ಮತ್ತು ಭಕ್ತಿಭಾವದ ಸಂದೇಶ ನೀಡುವ ದಾಸರ ಪದಗಳ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನೆರವೇರಲಿ ಎಂದು ಶುಭ ಹಾರೈಸಿದರು. ವಿಶೇಷ ಆಮಂತ್ರಿತರಾಗಿ ಆಗಮಿಸಿದ ಸಹಕಾರ ರೇಡಿಯೋದ ನಿಲಯ ನಿರ್ದೇಶಕರಾದ ಜೆ.ಕೆ. ಜಮಾದಾರ ಮಾತನಾಡಿ ಭಕ್ತಿಗೀತೆಗಳು ತಮ್ಮ ಭಕ್ತಿಯ ಭಾವಸ್ಪಂದನೆಯ ಮೂಲಕ ಕೇಳುಗರ ಹೃದಯಗಳನ್ನು ಮುಟ್ಟುತ್ತವೆ. ಇಂತಹ ಗೀತೆಗಳ ಆಯೋಜನೆ ಇಂದಿನ ಅವಶ್ಯಕತೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಸಮಾರಂಭವು ಹೊಂಬಾಳಿ ಕಲಾ ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷರಾದ ಮಂಜರಿ ಹೊಂಬಾಳಿಯವರ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳೊಂದಿಗೆ ಪ್ರಾರಂಭಗೊಂಡಿತು. ಕಲಾವಿದರಾದ ವಿದುಷಿ, ಸುಪ್ರಿಯಾ ಪ್ರವೀಣ ಹಾಗೂ ವಿದ್ವಾನ್, ರಾಘವೇಂದ್ರ ಸಿ.ಎನ್. ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು. ಡಾ. ದತ್ತಪ್ರಸನ್ನ ಪಾಟೀಲ ನಿರೂಪಿಸಿ, ವಂದಿಸಿದರು.

ವಿಶೇಷ ಕಾರ್ಯಕ್ರಮ ದಾಸವಾಣಿ ಯುಗಳ ಗಾಯನ ಕಲಾವಿದರಿಂದ ಪ್ರಸ್ತುತಗೊಂಡಿತು. ವಿದುಷಿ. ಸುಪ್ರಿಯಾ ಪ್ರವೀಣ, ವಿದ್ವಾನ್. ರಾಘವೇಂದ್ರ ಸಿ.ಎನ್. ಅವರ ದಾಸವಾಣಿ ಗಾಯನಕ್ಕೆ ತಬಲಾದಲ್ಲಿ ವಿಷ್ಣು ಜೋಶಿ, ಹಾರ್ಮೋನಿಯಂನಲ್ಲಿ ಚಿದಂಬರ ಜೋಶಿ, ತಾಳದಲ್ಲಿ ಸಂತೋಷ ಅಳವಂಡಿ ಸಾಥ್ ನೀಡಿದರು. ಅಭೂತಪೂರ್ವ ಜನಸ್ತೋಮದ ನಡುವೆ ದಾಸವಾಣಿ ಕಾರ್ಯಕ್ರಮ ಯಶಸ್ವಿಯಾಯಿತು.

ಕಾರ್ಯಕ್ರಮದಲ್ಲಿ ಶ್ರೀನಿವಾಸ ಹುಯಿಲಗೋಳ, ಸುಧೀರ ಬಿಂದಗಿ, ಡಾ. ಶ್ರೀಕಾಂತ ಪಾಠಕ, ಪಂ. ಅರವಿಂದ ಹುಯಿಲಗೋಳ, ಶ್ರೀಮತಿ ಉಷಾ ಕಾರಂತ, ಪಂ. ವೆಂಕಟೇಶ ಅಲ್ಕೋಡ್, ನಾಗಲಿಂಗ ಮುರಗಿ, ಶ್ರೀಮತಿ ಪೂಜಾ ಬೇವೂರ, ವಿಜಯ ಕಿರೇಸೂರ, ಶ್ರೀ ಹರೀಶ ಹೊಂಬಾಳಿ, ಪ್ರದ್ಯುಮ್ನ ಗುಡಿ ಮತ್ತೀತರರು ಉಪಸ್ಥಿತರಿದ್ದರು.

# ಐದನೇ ಕನ್ನಡ ಸಾಹಿತ್ಯ ಸಮ್ಮೇಳನದಂಗವಾಗಿ ನಡೆಯಲಿರುವ ಕವಿಗೋಷ್ಠಿಯಲ್ಲಿ ಕವನ ವಾಚನ

**ಮುದ್ದೇಬಿಹಾಳ :** ತಾಲೂಕಿನ ಐದನೇ ಕನ್ನಡ ಸಾಹಿತ್ಯ ಸಮ್ಮೇಳನದಂಗವಾಗಿ ನಡೆಯಲಿರುವ ಕವಿಗೋಷ್ಠಿಯಲ್ಲಿ ಕವನ ವಾಚನ ಮಾಡಲಿಚ್ಚಿಸುವ ಕವಿಗಳಿಂದ ಕವನ ಆಹ್ವಾನಿಸಲಾಗಿದೆ. ಕವಿಗೋಷ್ಠಿಯಲ್ಲಿ ಕವನ ವಾಚನ ಮಾಡಲಿಚ್ಚಿಸುವ ಮುದ್ದೇಬಿಹಾಳ ತಾಲೂಕು ವ್ಯಾಪ್ತಿಯ ಕವಿಗಳು 20 ಸಾಲುಗಳಿಗೆ ಮೀರದಂತೆ ತಮ್ಮ ಕವಿತೆಗಳನ್ನು ದಿನಾಂಕ 26–01–2025 ರ ಒಳಗಾಗಿ ಆಯ್ಕೆ ಸಮಿತಿಗೆ ಕಳಿಸಿಕೊಡಲು ತಿಳಿಸಲಾಗಿದೆ.ಆಸಕ್ತ ಕವಿಗಳು ತಮ್ಮ ಕವಿತೆಗಳನ್ನು ವ್ಯಾಟ್ಸಾಪ್ ಮೂಲಕ ಅಥವಾ ಖುದ್ದಾಗಿ ಶ್ರೀ ಗಂಗಾಧರ ಪವಾಡಶೆಟ್ಟಿ 9663316110, ಹಾಗೂ ಸುಮಲತಾ ಗಡಿಯಪ್ಪನವರ 7259051592 ಇವರಿಗೆ ಕಳಿಸ ಬಹುದಾಗಿದೆ ಎಂದು ಕಸಾಪ ಅಧ್ಯಕ್ಷ ಕಾಮರಾಜ ಬಿರಾದಾರ ಅವರು ಪ್ರಕಟಣೆಯಲ್ಲಿ ತಿಳಿಸಿದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State